ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 236 RNI Number : KNKAN/25/A2770 07-09-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :236 ರಾಯಚೂರು 07-09-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಕಾಂಗ್ರೆಸ್ ಸರ್ಕಾರಕ್ಕೆ ರೈತರ ಮೇಲೆ ಕರುಣೆ ಇಲ್ಲ:ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ



ಯಾದಗಿರಿ,ಸೆ.6-

ಮಳೆ ಕೊರತೆಯಿಂದ ಯಾದಗಿರಿ ಜಿಲ್ಲೆಯ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಬರಪೀಡಿತ ತಾಲೂಕುಗಳ ಮೊದಲ ಪಟ್ಟಿಯಲ್ಲಿ ಶಹಾಪುರ ತಾಲೂಕು ಮಾತ್ರ ಘೋಷಣೆಯಾಗಿದ್ದು, ಯಾದಗಿರಿ, ವಡಗೇರಾ, ಗುರುಮಿಠಕಲ್,ಸುರಪುರ ಹಾಗೂ ಹುಣಸಗಿ ತಾಲೂಕುಗಳಿಗೆ ಸ್ಥಾನ ನೀಡದಿರುವುದು ಖಂಡನೀಯ. ಇದೀಗ ಬಿಡುಗಡೆಯಾಗಿರುವ ಎರಡನೇ ಪಟ್ಟಿಯಲ್ಲೂ ಈ ತಾಲೂಕುಗಳನ್ನು ಕಡೆಗಣಿಸಿರುವುದು ಸರ್ಕಾರದ ರೈತಪರ ಕಾಳಜಿಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಬಿಜೆಪಿ ಯುವಮೋರ್ಚಾ ಯಾದಗಿರಿ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಯಾದಗಿರಿ ಜಿಲ್ಲೆಯ ರೈತರ ಕಣ್ಣೀರು ಸರ್ಕಾರಕ್ಕೆ ಕಾಣುತ್ತಿಲ್ಲವೇ, ಬರದ ಬವಣೆಯಲ್ಲಿ ರೈತರು ನರಳುತ್ತಿದ್ದರೂ ಸರ್ಕಾರದ ಬರಪೀಡಿತ ಪಟ್ಟಿಯಲ್ಲಿ ಶಹಾಪುರ ತಾಲೂ

3 ನೇ ಪುಟಕ್ಕೆ

ಹೋರಾಟಗಾರ ಉಮೇಶ್ ಮುದ್ನಾಳಗೆ ಜಿಲ್ಲಾ ಕುರುಬ ಸಂಘದಿಂದ ಸನ್ಮಾನ




ಯಾದಗಿರಿ,ಸೆ.6-

ಸಾಮಾಜಿಕ ಹೋರಾಟಗಾರ ಉಮೇಶ್.ಕೆ.ಮುದ್ನಾಳ ರವರಿಗೆ ಬೆಂಗಳೂರಿನ ಆರ್.ಡಿ. ನಗರದ ನಮ್ಮದು ಅಖಂಡ ಕರ್ನಾಟಕ ಸಮರ್ಥ ಸಾಹಿತ್ಯ ಸಂಸ್ಕೃತಿಕ ಪ್ರತಿಷ್ಠಾನವು ಪ್ರತಿವರ್ಷ ಕೊಡ ಮಾಡುವ ನಾಡಪ್ರಭು ಕೆಂಪೇಗೌಡ ಪ್ರಶಸ್ತಿಗೆ ಆಯ್ಕೆಯಾದ ಹಿನ್ನೆಲೆಯಲ್ಲಿ ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ನೇತೃತ್ವದಲ್ಲಿ ಇಂದು ಅವರ ಕಚೇರಿಯಲ್ಲಿ ಸನ್ಮಾನಿಸಿ ಶುಭಕೋರಿ ಅವರು ಮಾತನಾಡಿದರು. ಉಮೇಶ್ ಕೆ ಮದ್ನಾಳರವರು ಸುಮಾರು ಎರಡು ದಶಕಗಳಿಂದ ಜಿಲ್ಲೆಯಾದ್ಯಂತ ಸಾರ್ವಜನಿಕರ ಕುಂದು ಕೊರತೆಗಳ ಕುರಿತು ಹಗಲು ಇರುಳು ಎನ್ನದೆ ಹೋರಾಟ ಮಾಡುವ ಮೂಲಕ ಅಧಿಕಾರಿಗಳು ಜನಪ್ರತಿನಿಧಿ ಗಳ ಕಣ್ಣು ತೆರೆಸಿ ಜನರಿಗೆ ಮೂಲಭೂತ ಸೌಕರ್ಯ ನ್ಯಾಯ ಒದಗಿಸುವ ಕೆಲಸ ಮಾಡುತ್ತಿದ್ದಾರೆ

3 ನೇ ಪುಟಕ್ಕೆ

ಬಿಜೆಪಿ ಪಾದಯಾತ್ರೆ ವಿಫಲ; ರಾಜಕೀಯ ಉದ್ದೇಶದ ಹೋರಾಟ: ಯತೀಂದ್ರ



ರಾಯಚೂರು,ಸೆ.06-

ಬಿಜೆಪಿಯ ಪಾದಯಾತ್ರೆ ಸಂಪೂರ್ಣ ವಿಫಲವಾಗಿದ್ದು, ಜನರಿಂದ ನಿರೀಕ್ಷಿತ ಬೆಂಬಲ ದೊರೆಯುತ್ತಿಲ್ಲ. ಪಾದಯಾತ್ರೆಯ ಪ್ರಮುಖ ಬೇಡಿಕೆಯಾಗಿದ್ದ ಸಚಿವ ನಾಗೇಂದ್ರ ಅವರ ರಾಜೀನಾಮೆ ಈಗಾಗಲೇ ಈಡೇರಿದ್ದರೂ ಹೋರಾಟ ಮುಂದುವರಿಸಿರುವುದು ರಾಜಕೀಯ ಉದ್ದೇಶದಿಂದಲೇ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ರೈತರು ಬರದಿಂದ ಸಂಕಷ್ಟದಲ್ಲಿದ್ದಾರೆ. ಆದರೆ ವಿಧಾನಸಭೆ ಅಧಿವೇಶನದಲ್ಲಿ ರೈತರ ಹಾಗೂ ಬರಪೀಡಿತ ಪ್ರದೇಶಗಳ ಸಮಸ್ಯೆಗಳ ಕುರಿತು ಚರ್ಚಿಸಲು ಅವಕಾಶ ಕಲ್ಪಿಸುವ ಬದಲು ಬಿಜೆಪಿ ನಾಯಕರು ರಾಜಕೀಯ ವಿಚಾರಗಳನ್ನೇ ಮುಂದಿಟ್ಟುಕೊಂಡು ಸಮಯ ವ್ಯರ್ಥ ಮಾಡಿದ್ದಾರೆ ಎಂದು ಟೀಕಿಸಿದರು.

ಬಿಜೆಪಿ ನಾಯಕರಿಗೆ ಜನರ ಸಮಸ್ಯೆಗಳ ಬಗ್ಗೆ ಸ್ಪಷ್ಟತೆ ಹಾಗೂ ಕಾಳಜಿ ಇಲ್ಲ. ರೈತರ ಸಂಕಷ್ಟ, ಬರ ಪರಿಸ್ಥಿತಿ ಹಾಗೂ ಜನಜೀವನದ ಸಮಸ್ಯೆಗಳ ಕುರಿತು ಚರ್ಚಿಸುವುದಕ್ಕಿಂತ ರಾಜಕೀಯ ವಿಚಾರಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ ಎಂದು ದೂರಿದರು.

ಇದು ಅಹಿಂದ ಸಮಾವೇಶವಲ್ಲ ಬೆಂಗಳೂರಿನಲ್ಲಿ ಹಿಂದುಳಿದ ವರ್ಗಗಳ ಒಕ್ಕೂಟ ಆಯೋಜಿಸಿರುವ ಸಮಾವೇಶಕ್ಕೆ ಕೆಲವರಿಗೆ ಆಹ್ವಾನ ನೀಡದಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಯತೀಂದ್ರ, ಇದು ಅಹಿಂದ ಸಮಾವೇಶವಲ್ಲ. ಹಿಂದುಳಿದ ವರ್ಗಗಳ ಒಕ್ಕೂಟದ ವತಿಯಿಂದ ಆಯೋಜಿಸಿರುವ

3 ನೇ ಪುಟಕ್ಕೆ

ಕನಕಗಿರಿ ಎಪಿಎಂಸಿ: 29 ಮಳಿಗೆಗಳ ವಿರುದ್ಧ ಕ್ರಮಕ್ಕೆ ಆಗ್ರಹ



ಗಂಗಾವತಿ,ಸೆ.6-

ಕನಕಗಿರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯ 29 ಚಿಕ್ಕ ಮಳಿಗೆಗಳನ್ನು ನಿಯಮಬಾಹಿರವಾಗಿ ಬೇರೆ ಉದ್ದೇಶಗಳಿಗೆ ಬಳಸಲಾಗುತ್ತಿದೆ. ಈ ಕುರಿತು ತನಿಖೆ ನಡೆದಿದ್ದು, ಅನಧಿಕೃತ ವಹಿವಾಟು ನಡೆಸುತ್ತಿರುವವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಹುಸೇನಸಾಬ ಗಂಗನಾಳ ತಿಳಿಸಿದ್ದಾರೆ.

ಮಳಿಗೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಕಾನೂನಾತ್ಮಕವಾಗಿ ಸೂಕ್ತ ಎಂಬ ಕಾನೂನು ಸಲಹೆಯೂ ನೀಡಲಾಗಿದೆ. ಆದರೆ ಸಚಿವ ಶಿವರಾಜ ತಂಗಡಗಿ ಅವರು ಮಳಿಗೆದಾರರ ವಿರುದ್ಧ ಕ್ರಮ ಕೈಗೊಳ್ಳದಂತೆ ಮೌಖಿಕ ಸೂಚನೆ ನೀಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಆದ್ದರಿಂದ ಸಚಿವರು ತಮ್ಮ ಮೌಖಿಕ ಸೂಚನೆಯನ್ನು ಹಿಂಪಡೆದು, ನಿಯಮಾನುಸಾರ 29 ಮಳಿಗೆಗಳ ವಿರುದ್ಧ ಮುಟ್ಟುಗೋಲು ಸೇರಿದಂತೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಅವಕಾಶ ನೀಡಬೇಕು ಎಂದು ಗಂಗನಾಳ ಒತ್ತಾಯಿಸಿದ್ದಾರೆ.

ವಡಗೇರಾ ತಾಲೂಕ ಬರ ಘೋಷಿಸಿ ರೈತರ ಸಾಲ ಮನ್ನಾ ಮಾಡುವಂತೆ:ಸಿದ್ದು ನಾಯಕ ಆಗ್ರಹ




ವಡಗೇರಾ,ಸೆ.6-

ಬರಗಾಲದಿಂದ ತಾಲೂಕಿನ ರೈತರು ತೀವ್ರ ಸಂಕಷ್ಟದಲ್ಲಿದ್ದು ವಡಗೇರಾ ತಾಲೂಕನ್ನು ಬರ ಪ್ರದೇಶ ಎಂದು ಘೋಷಿಸಿ ರೈತರ ಸಾಲ ಮನ್ನಾ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದು ನಾಯಕ್ ಹತ್ತಿಕುಣಿ ಆಗ್ರಹಿಸಿದ್ದಾರೆ.ಇಂದು ವಡಗೇರಾ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಕ್ಷಣಾ ವೇದಿಕೆ ವಡಗೇರಾ ತಾಲೂಕು ನೂತನ ಪದಾಧಿಕಾರಿಗಳ ಆಯ್ಕೆ ಮಾಡಿ ಅವರು ಮಾತನಾಡಿದರು.ಒಂದು ವೇಳೆ ರಾಜ್ಯ ಸರ್ಕಾರ ನಿರ್ಲಕ್ಷ ವಹಿಸಿದ್ದಲ್ಲಿ ವಡಗೇರಾ ಪಟ್ಟಣ ಬಂದು ಮಾಡಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.ಶೀಘ್ರವೇ ತಾಲೂಕು ಕಚೇರಿಗಳ ಆರಂಭಿಸುವುದರ ಜೊತೆಗೆ ಪಟ್ಟಣದಲ್ಲಿ ಪದವಿ ಪೂರ್ವ ಪದವಿ ಮಹಾವಿದ್ಯಾಲಯ ಕಾಲೇಜು ಮಂಜೂರ ಮಾಡುವಂತೆ ಸ್ಥಳೀಯ ಶಾಸಕರಿಗೂ ಮತ್ತು ಜಿಲ್ಲಾಡಳಿತಕ್ಕೆ ಒತ್ತಾಯಿಸಿದರು.ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕದ ಅಧ್ಯಕ್ಷ ಅಬ್ದುಲ್ ಚಿಗಾನೂರ ಮಾತನಾಡಿ.ನಮ್ಮ ಸಂಘಟನೆಯ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ನಾಡು ನುಡಿ ಭಾಷೆ ರಕ್ಷಣೆಗೆ ಪ್ರತಿಯೊಬ್ಬರೂ ಪಣತೊಡ ಬೇಕಿದೆ ನಮ್ಮ ನೂತನ ತಾಲೂಕು ಅಭಿವೃದ್ಧಿಗಾಗಿ ಹಂತ ಹಂತವಾಗಿ ಹೋರಾಟ ಹಮ್ಮಿಕೊಳ್ಳುವುದಾಗಿ ಅವರು ತಿಳಿಸಿದರು.ತಾಲೂಕು ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.ಶರಣು ಅಂಗಡಿ ಗೊಂದೇನೂರ(ಗೌರವಾಧ್ಯಕ್ಷರು)ಸಿದ್ದು ಪೂಜಾರಿ ತುಮಕೂರು(ಪ್ರ.ಕಾರ್ಯದರ್ಶಿ) ಪಿಡ್ಡಪ್ಪ ನಾಯಕ, ಬಸಯ್ಯ ಸ್ವಾಮಿ ಉಳ್ಳೆಸೂಗೂರ,ಅಯ್ಯಣ್ಣ ಜೆರಬಂಡಿ ಹಾಲಗೇರಾ,ಅಬ್ದುಲ್ ಖತಾಲಿ(ಉಪಾಧ್ಯಕ್ಷರುಗಳು)ಶರಣು

3 ನೇ ಪುಟಕ್ಕೆ

ಮಕ್ಕಳನ್ನು ನಶೆ ಮೊಬೈಲ್ ಚಟದಿಂದ ಪಾರು ಮಾಡಿ: ವೈಚಾರಿಕತೆ ಬೆಳೆಸಬೇಕು: ಸ್ವಾಮೀಜಿ





ರಾಯಚೂರು, ಸೆ.6-

ದೇಶದಲ್ಲಿ ಮಕ್ಕಳು ನಶೆ ಪದಾರ್ಥಗಳ ಸೇವನೆ, ಮೊಬೈಲ್ ಚಟ, ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆ ಹಾಗೂ ಮಾನಸಿಕ ಒತ್ತಡದಂತಹ ಹಲವು ದುಷ್ಪರಿಣಾಮಗಳಿಗೆ ಬಲಿಯಾಗುತ್ತಿರುವ ಸಂದರ್ಭದಲ್ಲಿ, ಮಕ್ಕಳಿಗೆ ಕೇವಲ ಅಂಕ-ಅಕ್ಷರದ ಶಿಕ್ಷಣವಲ್ಲದೆ ಸಂಸ್ಕಾರ, ವೈಚಾರಿಕತೆ, ಮಾನವೀಯತೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ಅರಿವು ಮೂಡಿಸುವ ಅಗತ್ಯವಿದೆ ಎಂದು ಉರಿಲಿಂಗ ಪೆದ್ದಿ ಮಠದ ಪೀಠಾಧ್ಯಕ್ಷ ಪೂಜ್ಯ ಜ್ಞಾನ ಪ್ರಕಾಶ ಸ್ವಾಮೀಜಿ ಹೇಳಿದರು.

ನಗರದ ಕರ್ನಾಟಕ ನೌಕರರ ಸಂಘದ ಜಿಲ್ಲಾ ಘಟಕದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅರಿವಿನ ಮಾರ್ಗದಲ್ಲಿ-ಬುದ್ಧಪ್ರಜ್ಞಾ ಮಕ್ಕಳ ಮೈತ್ರಿ ಕಾರ್ಯಕ್ರಮ-2026 ಅನ್ನು ಸೆ.12 ಮತ್ತು 13ರಂದು ನಗರದ ಪಂಡಿತ್ ಸಿದ್ಧರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಇಂದಿನ ಮಕ್ಕಳೇ ನಾಳಿನ ದೇಶದ ಪ್ರಜೆಗಳು. ಮಕ್ಕಳನ್ನು ದುಶ್ಚಟಗಳಿಂದ ದೂರವಿಟ್ಟು, ಅವರಲ್ಲಿ ಪ್ರಶ್ನಿಸುವ, ಯೋಚಿಸುವ ಮತ್ತು ಸಮಾಜದ ಬಗ್ಗೆ ಕಾಳಜಿ ಹೊಂದುವ ಮನೋಭಾವ ಬೆಳೆಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಬುದ್ಧ, ಬಸವಣ್ಣ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಮಾನವೀಯ ಹಾಗೂ ಸಮಾನತೆಯ ಸಂದೇಶಗಳನ್ನು ಮಕ್ಕಳಿಗೆ ಪರಿಚಯಿಸಿ, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಲಾಗುವುದು ಎಂದರು.

32 ಬಗೆಯ ಚಟುವಟಿಕೆಗಳು

ಸುಮಾರು 6ರಿಂದ 16 ವರ್ಷದೊಳಗಿನ 200ರಿಂದ 300ಕ್ಕೂ ಅಧಿಕ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಗಾಯನ, ನೃತ್ಯ, ಭಾಷಣ, ಚಿತ್ರಕಲೆ, ಮಣ್ಣಿನ ಮಾದರಿ ತಯಾರಿಕೆ, ರಸಪ್ರಶ್ನೆ, ಬುದ್ಧ ಚಾಟಿಂಗ್, ನಾಟಕ ಸೇರಿದಂತೆ 32 ವಿವಿಧ ಚಟುವಟಿಕೆಗಳು ನಡೆಯಲಿವೆ.

ಡಾ.ಬಿ.ಆರ್.ಅಂಬೇಡ್ಕರ್ ಬುದ್ಧ, ಸಾವಿತ್ರಿಬಾಯಿ ಫುಲೆ, ಜ್ಯೋತಿಬಾ ಫುಲೆ, ಬಸವಣ್ಣ, ಕನಕದಾಸ, ಒನಕೆ ಓಬವ್ವ, ರಮಾಬಾಯಿ ಸೇರಿದಂತೆ ವಿವಿಧ ಮಹಾನ್ ಚಿಂತಕರು ಹಾಗೂ ಸಮಾಜ ಸುಧಾರಕರ ವೇಷಭೂಷಣ ಪ್ರದರ್ಶನದ

3 ನೇ ಪುಟಕ್ಕೆ

ರಾಯಚೂರು ಅಭಿವೃದ್ಧಿಗೆ ಸಚಿವ ಯತೀಂದ್ರ ಸಿದ್ದರಾಮಯ್ಯ ಜೊತೆ ಮಹತ್ವದ ಚರ್ಚೆ

ಆರ್‌ಡಿಎ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ ನೇತೃತ್ವದಲ್ಲಿ ಮುಖಂಡರ ಭೇಟಿ; ನಗರಾಭಿವೃದ್ಧಿ, ನೀರು ಒಳಚರಂಡಿ ಯೋಜನೆಗಳ ಕುರಿತು ಸಮಾಲೋಚನೆ



ರಾಯಚೂರು,ಸೆ.06-

ರಾಯಚೂರು ನಗರದ ಸಮಗ್ರ ಅಭಿವೃದ್ಧಿಗೆ ವೇಗ ನೀಡುವ ನಿಟ್ಟಿನಲ್ಲಿ ರಾಜ್ಯದ ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ರಾಯಚೂರು ಅಭಿವೃದ್ಧಿ ಪ್ರಾಧಿಕಾರದ (RDA) ಅಧ್ಯಕ್ಷ ರಾಜಶೇಖರ ರಾಮಸ್ವಾಮಿ ನೇತೃತ್ವದ ನಿಯೋಗವು ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಭೇಟಿ ಮಾಡಿ ಮಹತ್ವದ ಚರ್ಚೆ ನಡೆಸಿತು.

ರಾಯಚೂರು ನಗರದ ಪ್ರಸ್ತುತ ಅಭಿವೃದ್ಧಿ ಸ್ಥಿತಿ, ಅಗತ್ಯ ಮೂಲ ಸೌಕರ್ಯ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಹಾಗೂ ನಗರಾಭಿವೃದ್ಧಿಗೆ ಸಂಬಂಧಿಸಿದ ವಿವಿಧ ಯೋಜನೆಗಳ ಕುರಿತು ಸಚಿವರೊಂದಿಗೆ ನಿಯೋಗವು ವಿವರವಾಗಿ ಚರ್ಚಿಸಿತು. ನಗರದ ಭವಿಷ್ಯದ ಅಗತ್ಯಗಳಿಗೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡುವಂತೆ ಸಚಿವರ ಗಮನ ಸೆಳೆಯಲಾಯಿತು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ

3 ನೇ ಪುಟಕ್ಕೆ

ಗೆದ್ದವರನ್ನು ಕಡೆಗಣಿಸಿ ಸೋತವರಿಗೆ ಮಣೆ: ಶಿಕ್ಷಕರ ಸಂಘದ ತಾಲೂಕು ಸಮಿತಿ ರಚನೆಗೆ ಆಕ್ಷೇಪ



ರಾಯಚೂರು,ಸೆ.06-

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಯಚೂರು ತಾಲೂಕು ಘಟಕದ ಚುನಾವಣೆಯಲ್ಲಿ ಗೆದ್ದವರನ್ನು ಕಡೆಗಣಿಸಿ, ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳನ್ನು ಒಳಗೊಂಡು ಅಡ್ಹಾಕ್ ಸಮಿತಿ ರಚಿಸಲಾಗಿದೆ ಎಂದು ಸಂಘದ ಕಾರ್ಯಕಾರಿ ಸಮಿತಿ ನಿರ್ದೇಶಕ ಹಾಗೂ ಶಿಕ್ಷಕ ಮಾರುತಿ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 1ರಂದು ರಾಯಚೂರು ತಾಲೂಕು ಘಟಕಕ್ಕೆ ಚುನಾವಣೆ ನಡೆದಿತ್ತು. ಈ ಚುನಾವಣೆಗೆ ಸಂಬಂಧಿಸಿದಂತೆ ಶಿಕ್ಷಕರಾದ ಮಹಾಂತೇಶ ಹಾಗೂ ಪ್ರಮೀಳಾ ಪಾಟೀಲ್ ಅವರು ಕಲಬುರಗಿ ನ್ಯಾಯಾಲಯದ ಮೊರೆ ಹೋಗಿದ್ದ ಹಿನ್ನೆಲೆಯಲ್ಲಿ ಫಲಿತಾಂಶ ಪ್ರಕಟಿಸದಂತೆ ಚುನಾವಣಾಧಿಕಾರಿ ಕೋರೆನಲ್ ಸೂಚಿಸಿದ್ದರು. ಬಳಿಕ ದೂರುದಾರರು ಪ್ರಕರಣ ಹಿಂಪಡೆದ ಹಿನ್ನೆಲೆಯಲ್ಲಿ ಫಲಿತಾಂಶ ಪ್ರಕಟಣೆಗೆ ಇದ್ದ ತಡೆಯೂ ನಿವಾರಣೆಯಾಯಿತು ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಜುಲೈ 8ರಂದು ಫಲಿತಾಂಶ ಪ್ರಕಟಿಸುವಂತೆ ಚುನಾವಣಾಧಿಕಾರಿಗೆ ಮನವಿ ಸಲ್ಲಿಸಲಾಗಿತ್ತು. ಜುಲೈ 13ರಂದು ಸ್ಪರ್ಧಿಗಳನ್ನು ಚುನಾವಣಾ ಕಚೇರಿಗೆ ಕರೆಯಿಸಿ, ಚುನಾವಣೆಯಲ್ಲಿ ವಿಜೇತರಾದವರಿಗೆ ಅಧಿಕೃತವಾಗಿ ಪ್ರಮಾಣಪತ್ರ ವಿತರಿಸಲಾಗಿತ್ತು. ಆದರೂ ತಾಲೂಕು ಸಮಿತಿ ರಚನೆಗೆ ವಿಳಂಬ ಮಾಡಲಾಯಿತು ಎಂದು

3 ನೇ ಪುಟಕ್ಕೆ

ಜನರ ಅಹವಾಲುಗಳಿಗೆ ಸ್ಪಂದಿಸುವುದೇ ಪ್ರಜಾಸೇವಾ ಅಭಿಯಾನದ ಉದ್ದೇಶ : ಸಚಿವ ಪ್ರಿಯಾಂಕ್ ಖರ್ಗೆ



ಕಲಬುರಗಿ,ಸೆ.06-

ಸರಕಾರ ಜನರನ್ನು ಆಳುವುದಕ್ಕಲ್ಲ, ಅವರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವುದಕ್ಕಾಗಿ ಇರಬೇಕು. ಈ ಉದ್ದೇಶದಿಂದಲೇ ಪ್ರಜಾಸೇವಾ ಅಭಿಯಾನವನ್ನು ಆರಂಭಿಸಲಾಗಿದ್ದು, ಸರಕಾರವನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ರಾಜ್ಯದ ಗೃಹ, ಐಟಿ-ಬಿಟಿ, ಇ-ಆಡಳಿತ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕಮಲಾಪುರ ಪಟ್ಟಣದಲ್ಲಿ ಶನಿವಾರ ಆಯೋಜಿಸಿದ್ದ ಪ್ರಜಾಸೇವಾ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ಎಂದರೆ ಜನರಿಂದ, ಜನರಿಗಾಗಿ ಮತ್ತು ಜನರಿಗೋಸ್ಕರ ಇರುವ ವ್ಯವಸ್ಥೆ. ಜನರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಕಚೇರಿಗಳಿಗೆ ಅಲೆದಾಡುವ ಬದಲು ಸರಕಾರವೇ ಅವರ ಬಳಿಗೆ ತೆರಳಿ ಅಹವಾಲುಗಳನ್ನು ಸ್ವೀಕರಿಸಿ ಪರಿಹರಿಸುವ ಉದ್ದೇಶದಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಹಿಂದೆ ಜನರು ಅರ್ಜಿ ಸಲ್ಲಿಸಿದ ಬಳಿಕ ಅದರ ಸ್ಥಿತಿ ಏನಾಯಿತು ಎಂಬುದನ್ನು ತಿಳಿದುಕೊಳ್ಳಲು ಕಚೇರಿಗಳಿಗೆ ಅಲೆದಾಡಬೇಕಾಗಿತ್ತು. ಆದರೆ ಪ್ರಜಾಸೇವಾ ಇಲಾಖೆಯ ಮೂಲಕ ಜನರಿಂದ ಸ್ವೀಕರಿಸುವ ಪ್ರತಿಯೊಂದು ಅರ್ಜಿಗೂ ನಿಗದಿತ ಅವಧಿಯೊಳಗೆ ಸ್ಪಂದನೆ ನೀಡಲಾಗುವುದು. ಅರ್ಜಿ ಪುರಸ್ಕೃತವಾಗಿದೆಯೇ, ತಿರಸ್ಕೃತವಾಗಿದೆಯೇ ಅಥವಾ ಯಾವ ಹಂತದಲ್ಲಿದೆ ಎಂಬುದರ ಕುರಿತು ಅರ್ಜಿದಾರರಿಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಅನ್ನ, ಅಕ್ಷರ, ಆರೋಗ್ಯ ಹಾಗೂ ಆವಿಷ್ಕಾರಕ್ಕೆ ಒತ್ತು ನೀಡುವ ಮೂಲಕ ಕಲಬುರಗಿ ಮಾತ್ರವಲ್ಲದೆ ಇಡೀ ಕರ್ನಾಟಕದ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ ಎಂದ ಅವರು, ಪ್ರತಿ ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟಕ್ಕೂ ಭೇಟಿ ನೀಡಿ ಜನರ ಅಹವಾಲುಗಳನ್ನು ಸ್ವೀಕರಿಸುವುದಾಗಿ ಹೇಳಿದರು. ಅಹವಾಲು ಸ್ವೀಕರಿಸುವುದಷ್ಟೇ ಅಲ್ಲದೆ, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ರೈತರ ಸಾಲಮನ್ನಾಕ್ಕಾಗಿ ಕೇಂದ್ರಕ್ಕೆ ನಿಯೋಗ:

ಬರಗಾಲ ಘೋಷಣೆಗೆ ಕೇಂದ್ರ ಸರಕಾರ ನಿಗದಿಪಡಿಸಿರುವ ಮಾನದಂಡಗಳಿದ್ದು, ಅದಕ್ಕೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ರೈತರ ಹಿತಾಸಕ್ತಿ ಕಾಪಾಡಲು ಪಕ್ಷಭೇದ ಮರೆತು ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕೇಂದ್ರ ಸರ್ಕಾರ ಉದ್ಯಮಿಗಳ ಸುಮಾರು 10 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿದೆ. ಆದರೆ ರೈತರ ಸಾಲಮನ್ನಾವೂ ಮಾಡಬೇಕು ಎಂದು ಕೇಂದ್ರಕ್ಕೆ ಆಗ್ರಹಿಸಿದ ಅವರು, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ನಿಯೋಗ ತೆರಳುವ ಅಗತ್ಯವಿದೆ ಎಂದು ಅವರು ಹೇಳಿದರು.

ಸರಕಾರ ಜನರ ಬಾಗಿಲಿಗೆ ಬಂದಿದೆ: ತಿಪ್ಪಣ್ಣಪ್ಪ ಕಮಕನೂರ

ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ, ಬುದ್ಧ, ಬಸವಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳಿಗೆ ಅನುಗುಣವಾಗಿ ಸರಕಾರ ಪ್ರಜಾಸೇವಾ ಇಲಾಖೆಯನ್ನು ರೂಪಿಸಿದೆ. ಸರಕಾರವೇ ಜನರ ಮನೆ ಬಾಗಿಲಿಗೆ ಬಂದು ಅವರ ಸಂಕಷ್ಟಗಳನ್ನು ಆಲಿಸಿ ಪರಿಹರಿಸುವ ವ್ಯವಸ್ಥೆ ಇದಾಗಿದೆ ಎಂದರು.

ಕಾರ್ಯಕ್ರಮದ ಬಳಿಕ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಮಲಾಪುರ ಸೇರಿದಂತೆ ವಿವಿಧ ತಾಲೂಕು ಹಾಗೂ ಗ್ರಾಮಗಳಿಂದ ಆಗಮಿಸಿದ್ದ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಪಿಂಚಣಿ, ಆವಾಸ ಯೋಜನೆಗಳು ಸೇರಿದಂತೆ ವಿವಿಧ ಸರಕಾರಿ ಸೌಲಭ್ಯಗಳ ಹಲವು ಸಮಸ್ಯೆಗಳ ಕುರಿತು ಸಾರ್ವಜನಿಕರು ಸಚಿವರಿಗೆ ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ, ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ್ ಪಾಟೀಲ್, ಕಾಡಾ ಅಧ್ಯಕ್ಷ ಅಬ್ದುಲ್ ರಶೀದ್, ಕುಡಾ ಅಧ್ಯಕ್ಷ ಮರಝೂರ್ ಖಾನ್ ಆಲಂ, ಜಿಲ್ಲಾಧಿಕಾರಿ ಇಕ್ರಮ್ ಶರೀಫ್, ಕೆಕೆಆರ್‌ಟಿಸಿ ನಿರ್ದೇಶಕಿ ಬಿ.ಸುಶೀಲಾ, ಜಿಲ್ಲಾ ಉಸ್ತುವಾರಿ ಸಚಿವರ ಕಾರ್ಯದರ್ಶಿ ಸುಬೋಧ್ ಯಾದವ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಸಂಕನೂರ, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ, ಮಾಜಿ ಸಚಿವ ರೇವುನಾಯಕ ಬೆಳಮಗಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಹಾಗೂ ತಾಲೂಕುಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಲಬುರಗಿ ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಿ ಪರಿಹಾರ ನೀಡಿ: ಜಗನ್ನಾಥ ರೆಡ್ಡಿ



ಸೇಡಂ,ಸೆ.06-

ಮಳೆ ಕೊರತೆಯಿಂದ ಕಲಬುರಗಿ ಜಿಲ್ಲೆಯಲ್ಲಿ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದು, ಕೂಡಲೇ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಜಗನ್ನಾಥ ರೆಡ್ಡಿ ಗೋಟೂರ ಒತ್ತಾಯಿಸಿದರು.

ಈ ಕುರಿತು ಸಹಾಯಕ ಆಯುಕ್ತರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ರಾಜ್ಯದಲ್ಲಿ ಮಳೆ ಕೊರತೆಯ ಹಿನ್ನೆಲೆಯಲ್ಲಿ ಸರ್ಕಾರ ಈಗಾಗಲೇ 110 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿದೆ. ಆದರೆ ಕಲಬುರಗಿ ಜಿಲ್ಲೆಯ ರೈತರ ಸಮಸ್ಯೆಗಳಿಗೆ ಸೂಕ್ತ ಸ್ಪಂದನೆ ದೊರೆಯದೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಮಳೆಯ ಅಭಾವದಿಂದ ಬೆಳೆಗಳು ಹಾನಿಗೊಳಗಾಗಿದ್ದು, ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೂ ಇದುವರೆಗೆ ರೈತರಿಗೆ ಸಮರ್ಪಕ ಪರಿಹಾರ ದೊರೆತಿಲ್ಲ. ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ರಾಜ್ಯ ಸರ್ಕಾರ ರೈತರ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿವೆ ಎಂದು ದೂರಿದರು.

ಕೂಡಲೇ ಕಲಬುರಗಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ, ಸಂಕಷ್ಟದಲ್ಲಿರುವ ರೈತರಿಗೆ ಪ್ರತಿ ಎಕರೆಗೆ ₹25 ಸಾವಿರ ಪರಿಹಾರ ಬಿಡುಗಡೆ ಮಾಡಬೇಕು. ರೈತರ ಹಿತಾಸಕ್ತಿ ಹಾಗೂ ಜಿಲ್ಲೆಯ ಕೃಷಿ ಆಧಾರಿತ ಆರ್ಥಿಕತೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶಿವರಾಮ ರೆಡ್ಡಿ ಕೋಡಗಂಟಿ, ಚಾಂದ್ ಪಾಶಾ, ಶಖೀಲ್ ಶೇಖ್, ಅರುಣ ಪೂಜಾರಿ, ಶಿವಪುತ್ರಪ್ಪ ಮೋಘ, ಸೂರ್ಯಕಾಂತ ಹಂಗನಹಳ್ಳಿ, ಅಹ್ಮದ್ ಪಟೇಲ್, ಕವಿತಾ ನಿಡಗುಂದ, ರಿಯಾಜ್ ಪಟೇಲ್ ಸೇರಿದಂತೆ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಮಣ್ಣೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆ



ಅಫಜಲಪುರ,ಸೆ.06-

2026-27ನೇ ಸಾಲಿನ ಪ್ರೌಢಶಾಲೆಗಳ ವೈಯಕ್ತಿಕ ಕ್ರೀಡಾಕೂಟದಲ್ಲಿ ಮಣ್ಣೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಆಯ್ಕೆಯಾಗಿದ್ದಾರೆ.


ಬಾಲಕಿಯರ ವಿಭಾಗದಲ್ಲಿ ಗಂಗೂಬಾಯಿ ಸಿಂಗಡಗಾಂವ ಅವರು 1500 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಹಾಗೂ ಗುಂಡು ಎಸೆತ ಮತ್ತು ಬಲ್ಲೆ ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಸೌಂದರ್ಯ ಜಾದವ ಅವರು ಎತ್ತರ ಜಿಗಿತ ಹಾಗೂ ತ್ರಿವಿಧ ಜಿಗಿತದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಪ್ರತಿಕ್ಷಾ ಮೇತ್ರಿ, ಸಂಗಮ್ಮ ತಳವಾರ, ನಿರ್ಮಲಾ ನಾವಾಡಿ, ಕ್ರಾಂತಿ ಪೂಜಾರಿ ಹಾಗೂ ಗೀತಾ ಜಟಪ್ಪಗೊಳ ಅವರು 4×400 ಮೀಟರ್ ರಿಲೇ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಬಾಲಕರ ವಿಭಾಗದಲ್ಲಿ ಆಕಾಶ ತಳವಾರ ಅವರು ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನ ಹಾಗೂ ಸಂಗಮೇಶ ಅವರು 200 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಸಮರ್ಥ ನಾವಾಡಿ ಅವರು 3000 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಶಾಲೆಯ ಮುಖ್ಯೋಪಾಧ್ಯಾಯ ದತ್ತಪ್ಪ ಡೊಂಬಾಳೆ, ಶಿಕ್ಷಕ ವೃಂದ, ಸಿಬ್ಬಂದಿ, ಪಾಲಕರು, ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಮತ್ತು ಗ್ರಾಮಸ್ಥರು ಅಭಿನಂದಿಸಿ ಶುಭ ಹಾರೈಸಿದ್ದಾರೆ.

ಕಾಳಗಿಯಲ್ಲಿ ನೂತನ ನ್ಯಾಯಾಲಯ ಉದ್ಘಾಟನೆ



ಕಾಳಗಿ,ಸೆ.06-

ಜನರ ಹಕ್ಕುಗಳ ರಕ್ಷಣೆ ಹಾಗೂ ಸಕಾಲದಲ್ಲಿ ನ್ಯಾಯ ಒದಗಿಸುವುದು ನ್ಯಾಯಾಲಯಗಳ ಪ್ರಮುಖ ಉದ್ದೇಶವಾಗಿದೆ ಎಂದು ಕಲಬುರಗಿ ಜಿಲ್ಲೆಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಶಿವಶಂಕರ ಅಮರಣ್ಣನವರ್ ಹೇಳಿದರು.

ಪಟ್ಟಣದಲ್ಲಿ ನೂತನವಾಗಿ ಸ್ಥಾಪಿಸಲಾದ ಸಿವಿಲ್ ನ್ಯಾಯಾಲಯ ಹಾಗೂ ಜೆಎಂಎಫ್‌ಸಿ ನ್ಯಾಯಾಲಯದ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಳಗಿಯಲ್ಲಿ ನೂತನ ನ್ಯಾಯಾಲಯ ಆರಂಭವಾಗಿರುವುದರಿಂದ ಕಾಳಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ನ್ಯಾಯಾಂಗ ಸೇವೆಗಳು ಸ್ಥಳೀಯವಾಗಿಯೇ ಲಭ್ಯವಾಗಲಿವೆ. ಇದರಿಂದ ನ್ಯಾಯಕ್ಕಾಗಿ ದೂರದ ಪ್ರದೇಶಗಳಿಗೆ ತೆರಳುವ ಅನಿವಾರ್ಯತೆ ಕಡಿಮೆಯಾಗಲಿದ್ದು, ಸಾರ್ವಜನಿಕರಿಗೆ ತ್ವರಿತವಾಗಿ ಹಾಗೂ ಸುಲಭವಾಗಿ ನ್ಯಾಯ ದೊರಕಿಸುವಲ್ಲಿ ನೂತನ ನ್ಯಾಯಾಲಯ ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದರು.

ಈ ಭಾಗದ ಜನರಿಗೆ ನ್ಯಾಯಾಲಯದ ಅಗತ್ಯವಿತ್ತು. ಪ್ರಸ್ತುತ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡದಲ್ಲಿ ತಾತ್ಕಾಲಿಕವಾಗಿ ಸುಸಜ್ಜಿತ ನ್ಯಾಯಾಲಯ ಸ್ಥಾಪಿಸಲು ಮಾಜಿ ಶಾಸಕ ವಿಶ್ವನಾಥ ಪಾಟೀಲ ಹೆಬ್ಬಾಳ ಅವರ ಶ್ರಮ ಮಹತ್ವದ್ದಾಗಿದೆ. ಇದರಿಂದ ಸಾರ್ವಜನಿಕರು ಪ್ರಕರಣಗಳ ವಿಚಾರಣೆಗಾಗಿ ದೂರದ ಊರುಗಳಿಗೆ ತೆರಳದೆ ಸ್ಥಳೀಯವಾಗಿಯೇ ನ್ಯಾಯ ಪಡೆಯಲು ಸಾಧ್ಯವಾಗಲಿದೆ ಎಂದರು.

ಕಾಳಗಿಯಲ್ಲಿ ಶಾಶ್ವತ ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕಾಗಿ ಶಿವಶರಣಪ್ಪ ಕಮಲಾಪೂರ ಅವರು ಮೂರು ಎಕರೆ ಜಮೀನು ದೇಣಿಗೆ ನೀಡಿರುವುದು ಹೆಮ್ಮೆಯ ವಿಷಯವಾಗಿದೆ. ಹೊಸ ತಾಲೂಕು ಕೇಂದ್ರಗಳಲ್ಲಿ ಸರ್ಕಾರ 105 ನ್ಯಾಯಾಲಯ ಕಟ್ಟಡಗಳನ್ನು ಸ್ಥಾಪಿಸಲು ಮುಂದಾಗಿದೆ. ಸ್ಥಳೀಯ ನಾಯಕರು ಹಾಗೂ ಶಾಸಕರು ಮುತುವರ್ಜಿ ವಹಿಸಿ ಕಾಳಗಿಯಲ್ಲಿ ಆದಷ್ಟು ಬೇಗ ಶಾಶ್ವತ ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕೆ ಶ್ರಮಿಸಬೇಕು ಎಂದು ಹೇಳಿದರು.

ನ್ಯಾಯಾಲಯ ಸ್ಥಾಪನೆಗೆ ಶ್ರಮಿಸಿದ ಮಾಜಿ ಶಾಸಕ ವಿಶ್ವನಾಥ ಪಾಟೀಲ ಹೆಬ್ಬಾಳ, ನಿವೃತ್ತ ನ್ಯಾಯಾಧೀಶ ಡಾ. ಚೆನ್ನಮಲ್ಲಪ್ಪ ಬೆನಕನಳ್ಳಿ ಹಾಗೂ ನ್ಯಾಯಾಲಯ ಕಟ್ಟಡಕ್ಕಾಗಿ ಭೂಮಿ ದೇಣಿಗೆ ನೀಡಿದ ಶಿವಶರಣಪ್ಪ ಕಮಲಾಪೂರ ಅವರನ್ನು ಸತ್ಕರಿಸಲಾಯಿತು.

ಇದಕ್ಕೂ ಮೊದಲು ನ್ಯಾಯಾಲಯ ಕಟ್ಟಡ ಉದ್ಘಾಟನೆಗೆ ಆಗಮಿಸಿದ ನ್ಯಾಯಮೂರ್ತಿ ಶಿವಶಂಕರ ಅಮರಣ್ಣನವರ್ ಅವರನ್ನು ಪೊಲೀಸ್ ಇಲಾಖೆಯಿಂದ ಸರ್ಕಾರಿ ಗೌರವದೊಂದಿಗೆ ಸ್ವಾಗತಿಸಲಾಯಿತು.

ವಿಧಾನ ಪರಿಷತ್ ಸದಸ್ಯ ಜಗದೇವ್ ಗುತ್ತೇದಾರ ಹಾಗೂ ಮಾಜಿ ಶಾಸಕ ವಿಶ್ವನಾಥ ಪಾಟೀಲ ಹೆಬ್ಬಾಳ ಮಾತನಾಡಿದರು. ಕಾಳಗಿ ತಾಲೂಕು ವಕೀಲರ ಸಂಘದ ಅಧ್ಯಕ್ಷ ಡಿ.ಎಸ್. ನಾಮದಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀನಿವಾಸ್ ನವಲಿ ಸ್ವಾಗತಿಸಿದರು.

ಶಾಸಕ ಡಾ. ಅವಿನಾಶ್ ಜಾಧವ್, ಕಾಂಗ್ರೆಸ್ ಮುಖಂಡ ಸುಭಾಷ್ ರಾಠೋಡ, ಶಿವಶರಣಪ್ಪ ಕಮಲಾಪೂರ, ನಿವೃತ್ತ ನ್ಯಾಯಾಧೀಶ ಡಾ. ಚೆನ್ನಮಲ್ಲಪ್ಪ ಬೆನಕನಳ್ಳಿ, ವಕೀಲರಾದ ವೈಮೂದ ಕಂಚಗಾರ, ಮಹಾಂತೇಶ ಮಂಡೆವಾಲ, ರೇವಣಸಿದ್ದಪ್ಪ ಮಾಸ್ಟರ್ ಬಸವರಾಜ ಶಿವಗೋಳ, ರೇವಣಸಿದ್ದಪ್ಪ ತೇಲಿ, ಶಶಿಕಾಂತ ಅಡಕಿ, ರಾಜಶೇಖರ ರಟಕಲ್, ಅರುಣಕುಮಾರ ಕೊರವಿ, ಜೀವನ ಮಂಗಲಗಿ, ಎನ್.ಎಸ್ ಪಾಟೀಲ, ಮಂಜುನಾಥ್ ಪಾಟೀಲ, ನಾಗಭೂಷಣ ಹುಲಗುಂದಿ, ನಾಗಣ್ಣ ಚೊಂಚಿ, ಸಂಪತ ತೆಗಲಪ್ಪಿ, ಜಿಎಲ್ ನಾರಾಯಣಸ್ವಾಮಿ, ಶ್ರೀನಿವಾಸ ನವಲೆ ಸೇರಿದಂತೆ ಅನೇಕ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ವಕೀಲರ ಸಂಘದ ಪದಾಧಿಕಾರಿಗಳು ಇದ್ದರು.

ಸಮಾಜ, ರಾಜಕಾರಣ ಅರಿಯಲು ಅಧ್ಯಾಪಕರ ಮಾರ್ಗದರ್ಶನ ಅಗತ್ಯ: ಡಾ.ಭೀಮಾಶಂಕರ್ ಬಿರಾದಾರ್



ಬೀದರ್,ಸೆ.06-

ಮನುಷ್ಯನಲ್ಲಿ ಸಹಜವಾಗಿರುವ ಕಲಿಕೆಗೆ ಮಾತ್ರ ಅಧ್ಯಾಪಕ ಅಗತ್ಯವಿಲ್ಲ. ಸಮಾಜವನ್ನು ಗ್ರಹಿಸಲು, ರಾಜ ಕಾರಣವನ್ನು ಅರ್ಥಮಾಡಿಕೊಳ್ಳಲು ಹಾಗೂ ಸಾಂಸ್ಕೃತಿಕ ಅರಿವು ಮೂಡಿಸಿಕೊಳ್ಳಲು ಅಧ್ಯಾಪಕರ ಮಾರ್ಗದರ್ಶನ ಅಗತ್ಯ ಎಂದು ಶ್ರೀ ಬಸವೇಶ್ವರ ಪದವಿ ಕಾಲೇಜಿನ ಅಧ್ಯಾಪಕ ಡಾ. ಭೀಮಾಶಂಕರ್ ಬಿರಾದಾರ್ ಹೇಳಿದರು.

ಬಸವಕಲ್ಯಾಣ ನಗರದ ಎಸ್‌ಎಸ್‌ಕೆಬಿ ಕಾಲೇಜಿನಲ್ಲಿ ಐಕ್ಯೂಎಸಿ, ಎನ್‌ಎಸ್‌ಎಸ್ ಹಾಗೂ ಎನ್‌ಸಿಸಿ ವತಿಯಿಂದ ಶನಿವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಾಪಕರು ವಿದ್ಯಾರ್ಥಿಗಳಿಗೆ ಲೋಕದ ವ್ಯವಹಾರಗಳು ಹಾಗೂ ಪ್ರಕೃತಿಯ ಸಂಗತಿಗಳನ್ನು ಗ್ರಹಿಸುವ ಅರಿವಿನ ನೋಟವನ್ನು ನೀಡುತ್ತಾರೆ. ತರಗತಿ ಕೋಣೆಯಲ್ಲಿ ಪ್ರಜಾಪ್ರಭುತ್ವದ ವಾತಾವರಣವಿದ್ದರೆ, ಅಲ್ಲಿಂದ ಹೊರಬರುವ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ ಹಾಗೂ ಸಮಾನತೆಯ ಪರಿಕಲ್ಪನೆಗಳು ಗಟ್ಟಿಯಾಗುತ್ತವೆ. ಸಂಶೋಧನೆಯ ಹಿಂದಿನ ಶ್ರಮ ಹಾಗೂ ಸಿದ್ಧಾಂತದ ತಾತ್ವಿಕತೆಯನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವ ಜವಾಬ್ದಾರಿ ಅಧ್ಯಾಪಕರ ಮೇಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ಶಿವಕುಮಾರ್ ಪಾಟೀಲ್ ಮಾತನಾಡಿ, ಭಾರತ ವೈವಿಧ್ಯತೆಯಿಂದ ಕೂಡಿದ ದೇಶವಾಗಿದ್ದು, ಹಲವು ಪಂಥಗಳು ಹಾಗೂ ತತ್ವಗಳನ್ನು ಹೊಂದಿದೆ. ಗುರು ಪರಂಪರೆಗೆ ವಿಶೇಷ ಸ್ಥಾನಮಾನ ಹೊಂದಿರುವ ದೇಶದಲ್ಲಿ ವಿವಿಧ ವಿಚಾರಗಳನ್ನು ವಿಶ್ಲೇಷಿಸಿ ಒಮ್ಮತಕ್ಕೆ ಬರುವ ಪರಂಪರೆಯಿದೆ. ವೈವಿಧ್ಯತೆಯಲ್ಲಿ ಏಕತೆ ಕಾಣುವುದೇ ಭಾರತದ ಸೌಂದರ್ಯ ಎಂದು ಹೇಳಿದರು.


ಭಾರತದಲ್ಲಿ ಆಕ್ರಮಣಶೀಲತೆಗಿಂತ ಶಾಂತಿ ಹಾಗೂ ಸೌಹಾರ್ದತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಇದರ ಮೂಲ ಇಲ್ಲಿನ ಗುರು ಪರಂಪರೆಯಲ್ಲಿದೆ. ಗುರುಗಳು ಕ್ರೌರ್ಯವನ್ನು ಪ್ರಚೋದಿಸುವ ಬದಲು ಸಹನೆ, ಸೌಹಾರ್ದತೆ ಹಾಗೂ ಸಹಬಾಳ್ವೆಗೆ ಆದ್ಯತೆ ನೀಡಿದ್ದಾರೆ. ಪಾಠದ ಜತೆಗೆ ವಿದ್ಯಾರ್ಥಿಗಳಿಗೆ ಮೌಲ್ಯಗಳನ್ನು ತಿಳಿಸುವ ಹೊಣೆಗಾರಿಕೆಯೂ ಶಿಕ್ಷಕರ ಮೇಲಿದೆ ಎಂದರು.

ಸಂವಿಧಾನ ನಮಗೆ ಹಕ್ಕುಗಳನ್ನು ನೀಡುವುದರ ಜತೆಗೆ ಕರ್ತವ್ಯ ಪ್ರಜ್ಞೆಯನ್ನೂ ಬೆಳೆಸಿದೆ. ದೇಶದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರು ಸ್ವಾತಂತ್ರ್ಯಪೂರ್ವದಲ್ಲಿಯೇ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡಿದ್ದಾರೆ. ಕುಟುಂಬದಲ್ಲಿ ತಾಯಿ ಮೊದಲ ಗುರುವಾಗಿದ್ದರೆ, ಅಧ್ಯಾಪಕರು ನಂತರದ ಗುರುಗಳಾಗುತ್ತಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಹಾಗೂ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸುರೇಶ್ ಎಚ್.ಆರ್. ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಉಪನ್ಯಾಸಕ ಪ್ರೊ. ವಿಠೋಬಾ ಡೊಣ್ಣೇಗೌಡರ್, ಸೂರ್ಯಕಾಂತ್ ನಾಸೆ, ನಾಗರಾಜ್ ನಿಂಬಾಳ್ಕರ್ ಭಾರತಿ ಮಠ್, ವೈಶಾಲಿ, ಸತೀಶ್ ರಾಥೋಡ್, ಅಶ್ವಿನಿ ಇದ್ದರು. ಐಕ್ಯೂಎಸಿ ಸಂಯೋಜಕ ಡಾ. ವಿಜಯಕುಮಾರ್ ತಳವಾರ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಭೀಮಶಂಕರ್ ಪೂಜಾರಿ ನಿರೂಪಿಸಿದರು. ಕಲ್ಯಾಣಪ್ಪ ನಾವದಗಿ ವಂದಿಸಿದರು.

ಭಾಲ್ಕಿ ಆರೋಗ್ಯವಂತ ಮಕ್ಕಳೇ ದೇಶದ ಉಜ್ವಲ ಭವಿಷ್ಯ: ನ್ಯಾ.ರಾಜಶೇಖರ್ ಹರಸೂರ್



ಭಾಲ್ಕಿ,ಸೆ.06-

ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು ಆರೋಗ್ಯವಂತರಾದರೆ ದೇಶದ ಭವಿಷ್ಯ ಉಜ್ವಲವಾಗುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ರಾಜಶೇಖರ್ ಹರಸೂರ್ ಹೇಳಿದರು.

ತಾಲೂಕಿನ ಭಾತಂಬ್ರಾ ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ ರಾಷ್ಟ್ರೀಯ ಪೋಷಣ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪೋಷಣ ಅಭಿಯಾನ ನಿರಂತರವಾಗಿ ನಡೆಯಬೇಕಾದ ಜನಜಾಗೃತಿ ಕಾರ್ಯಕ್ರಮವಾಗಿದೆ. ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಜತೆಗೆ ಅವುಗಳ ಕುರಿತು ಜನರಲ್ಲಿ ಅರಿವು ಮೂಡಿಸುವುದು ಅಗತ್ಯ. ಪೋಷಣ ಅಭಿಯಾನ ಕೇವಲ ಕಾರ್ಯಕ್ರಮವಲ್ಲ, ಅದೊಂದು ಜನಾಂದೋಲನವಾಗಿದೆ ಎಂದರು.

ತಾಯಂದಿರ ಆರೋಗ್ಯ ಉತ್ತಮವಾಗಿದ್ದಾಗ ಮಾತ್ರ ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಸಮರ್ಪಕವಾಗಿ ಸಾಧ್ಯವಾಗುತ್ತದೆ. ಗರ್ಭಿಣಿಯರು ಪೌಷ್ಟಿಕ ಆಹಾರ ಸೇವಿಸುವುದರ ಜೊತೆಗೆ ಆರೋಗ್ಯದ ಬಗ್ಗೆ ಸೂಕ್ತ ಕಾಳಜಿ ವಹಿಸಬೇಕು. ಆರೋಗ್ಯವಂತ ಮಕ್ಕಳೇ ದೇಶದ ಭವಿಷ್ಯವಾಗಿರುವುದರಿಂದ ಉತ್ತಮ ಆರೋಗ್ಯವಂತ ಪೀಳಿಗೆಯನ್ನು ನಿರ್ಮಿಸುವ ಉದ್ದೇಶದಿಂದ ಪೋಷಣ ಅಭಿಯಾನದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ನ್ಯಾಯಾಧೀಶೆ ಸವಿತಾ ಮಾತನಾಡಿ, ಆರೋಗ್ಯವೇ ಭಾಗ್ಯ ಎಂಬ ಮಾತಿನ ಮಹತ್ವವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಉತ್ತಮ ಆರೋಗ್ಯವಿಲ್ಲದೆ ಜೀವನದ ಯಾವುದೇ ಸಾಧನೆಯನ್ನು ಸಂಪೂರ್ಣವಾಗಿ ಅನುಭವಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಆರೋಗ್ಯಕರ ಜೀವನಶೈಲಿ ಹಾಗೂ ಪೌಷ್ಟಿಕ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಮಹೇಶ್ ರಾಚೋಟೆ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಹಬ್ಬ-ಹರಿದಿನಗಳಲ್ಲಿ ತಯಾರಿಸುವ ವಿಶೇಷ ಅಡುಗೆಗಳು ಕೇವಲ ಆಚರಣೆಗೆ ಸೀಮಿತವಾಗಿರದೆ, ಆರೋಗ್ಯ ಹಾಗೂ ಋತುಮಾನಕ್ಕೆ ಪೂರಕವಾಗಿವೆ. ಪೂರ್ವಜರು ಬಳಸುತ್ತಿದ್ದ ನೈಸರ್ಗಿಕ ಧಾನ್ಯಗಳು ಹಾಗೂ ದೇಸಿ ಆಹಾರ ಪದ್ಧತಿ ವಿಶ್ವಕ್ಕೆ ಮಾದರಿಯಾಗಿತ್ತು. ಆದರೆ ಇಂದಿನ ಫಾಸ್ಟ್‌ಫುಡ್ ಸಂಸ್ಕೃತಿಯಿಂದಾಗಿ ಪೌಷ್ಟಿಕಾಂಶದ ಕೊರತೆ ಹೆಚ್ಚುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಸತೀಶ್ ಪಾಟೀಲ್ ವಹಿಸಿದ್ದರು. ವಕೀಲ ವಿಜಯಕುಮಾರ್ ಭೂಸಗುಂಡೆ ಅವರು ಪೌಷ್ಟಿಕತೆ ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಸಿಡಿಪಿಒ ಎಂ.ಡಿ. ಖಲೀಲ್, ವಕೀಲರ ಸಂಘದ ಉಪಾಧ್ಯಕ್ಷ ಮಕರಂದ್ ಮಾನಕಾರಿ, ಕಾರ್ಯದರ್ಶಿ ವಾಗೇಶ್ ಪಾಟೀಲ್, ಜಂಟಿ ಕಾರ್ಯ ದರ್ಶಿ ನೀಲಕಂಠ್ ಬಿರಾದಾರ್ ಹಿರಿಯ ನ್ಯಾಯವಾದಿ ವೆಂಕಟರಾವ್ ಭೂರಾಳೆ, ವಕೀಲರಾದ ಸಂಗಮೇಶ್ ಗಾಮಾ, ಶಿವಶಂಕರ್ ಲದ್ದೆ, ಸಂಗಶೆಟ್ಟಿ ಪಾಟೀಲ್, ಶ್ರೀಕಾಂತ್ ಭೂರಾಳೆ, ಧನರಾಜ್ ಸೋನಾಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಮೌಲ್ವಿಚಾರಕಿ ಆರತಿ ಮೇತ್ರೆ ನಿರೂಪಿಸಿ, ವಂದಿಸಿದರು.

ಒಂದನೇಯ ಪುಟದಿಂದ

ಬಿಜೆಪಿ ಪಾದಯಾತ್ರೆ ವಿಫಲ; ರಾಜಕೀಯ ಉದ್ದೇಶದ ಹೋರಾಟ: ಯತೀಂದ್ರ

ಕಾರ್ಯಕ್ರಮವಾಗಿದ್ದು, ಯಾರನ್ನು ಆಹ್ವಾನಿಸಬೇಕು ಎಂಬುದನ್ನು ಆಯೋಜಕರು ನಿರ್ಧರಿಸುತ್ತಾರೆ ಎಂದು ಸ್ಪಷ್ಟಪಡಿಸಿದರು.

ಕೇಂದ್ರದಿಂದ ಬರ ಪರಿಹಾರಕ್ಕೆ ಸ್ಪಂದನೆ ಇಲ್ಲ

ಬರ ಪರಿಹಾರದ ಕುರಿತು ಮಾತನಾಡಿದ ಅವರು, ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯಂತೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲಿದೆ. ಆದರೆ ಕೇಂದ್ರ ಸರ್ಕಾರದಿಂದಲೂ ಬರ ಪರಿಹಾರ ನೀಡಬೇಕು ಎಂದು ಮುಖ್ಯಮಂತ್ರಿ ಮನವಿ ಮಾಡಿದ್ದರೂ ಇದುವರೆಗೆ ಸಮರ್ಪಕ ಸ್ಪಂದನೆ ದೊರೆತಿಲ್ಲ ಎಂದು ಹೇಳಿದರು.

ಈ ಹಿಂದೆ ರಾಜ್ಯಕ್ಕೆ ಬರಬೇಕಾಗಿದ್ದ ತೆರಿಗೆ ಪಾಲಿನ ವಿಚಾರದಲ್ಲಿಯೂ ಕೇಂದ್ರ ಸರ್ಕಾರ ಅನ್ಯಾಯ ಮಾಡಿತ್ತು. ಕಾನೂನು ಹೋರಾಟದ ಬಳಿಕ ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ತೆರಿಗೆ ಪಾಲು ಬಿಡುಗಡೆಯಾಗಿದೆ ಎಂದು ತಿಳಿಸಿದರು.

''ನಮ್ಮದು ಜನಪರ ಸರ್ಕಾರ. ಬಿಜೆಪಿ ಸರ್ಕಾರದಂತೆ ಜನವಿರೋಧಿ ಹಾಗೂ ಪಕ್ಷಪಾತದ ಸರ್ಕಾರವಲ್ಲ'' ಎಂದು ಯತೀಂದ್ರ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಮಕ್ಕಳನ್ನು ನಶೆ ಮೊಬೈಲ್ ಚಟದಿಂದ ಪಾರು ಮಾಡಿ: ವೈಚಾರಿಕತೆ ಬೆಳೆಸಬೇಕು: ಸ್ವಾಮೀಜಿ

ಮೂಲಕ ಮಕ್ಕಳಿಗೆ ಅವರ ಜೀವನ ಮತ್ತು ಸಂದೇಶಗಳನ್ನು ಪರಿಚಯಿಸಲಾಗುವುದು.

, , ಎಂಬ ಆಶಯದೊಂದಿಗೆ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಮಗುವಿಗೂ ಪುಸ್ತಕ, ಪೆನ್ನು, ಪ್ರಮಾಣಪತ್ರ ಹಾಗೂ ಪದಕ ನೀಡಲಾಗುವುದು. ಈಗಾಗಲೇ ಭಾಗವಹಿಸುವ ಮಕ್ಕಳ ಜೊತೆಗೆ ಆಸಕ್ತ ಇತರ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸಲಾಗಿದ್ದು, ಸ್ಥಳದಲ್ಲಿಯೇ ನೋಂದಣಿಗಾಗಿ ಪ್ರತ್ಯೇಕ ಕೌಂಟರ್ ತೆರೆಯಲಾಗುವುದು ಎಂದು ಆಯೋಜಕರು ತಿಳಿಸಿದರು.

ಮಕ್ಕಳಲ್ಲಿ ಪ್ರಜ್ಞೆ ಬೆಳೆಸುವ ವೇದಿಕೆ

ಮಕ್ಕಳ ಪ್ರತಿಭೆ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗದೆ, ಬುದ್ಧನ ಪ್ರಜ್ಞೆ, ಬಸವಣ್ಣನ ಸಮಾನತೆ ಮತ್ತು ಅಂಬೇಡ್ಕರ್ ಅವರ ಸಂವಿಧಾನಿಕ ಮೌಲ್ಯಗಳನ್ನು ಮಕ್ಕಳ ಮನಸ್ಸಿ ನಲ್ಲಿ ಬಿತ್ತುವ ವೇದಿಕೆಯಾಗಿ ಕಾರ್ಯಕ್ರಮ ರೂಪುಗೊಳ್ಳಲಿದೆ. ಭವಿಷ್ಯದಲ್ಲಿ ಜವಾಬ್ದಾರಿಯುತ, ವೈಚಾರಿಕ ಹಾಗೂ ಉತ್ತಮ ನಾಗರಿಕರನ್ನು ರೂಪಿಸುವುದು ಇದರ ಆಶಯವಾಗಿದೆ ಎಂದು ಮೈಸೂರು ಮಲ್ಕೊಂಡಿ ಮಹಾದೇವ ಸ್ವಾಮಿ ಹೇಳಿದರು.

ಜಿಲ್ಲೆಯ ಪಾಲಕರು ತಮ್ಮ ಮಕ್ಕಳೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಗಣ್ಯರ ಉಪಸ್ಥಿತಿ: ಪೂಜ್ಯ ಮನೋರಕ್ಷಿತ ಬಂತೇಜಿ, ಬೋಧಿದತ್ತ ಬಂತೇಜಿ, ನಾಗರತ್ನ ಬಂತೇಜಿ, ವರಜ್ಯೋತಿ ಬಂತೇಜಿ, ದಮ್ಮದೀಪ ಬಂತೇಜಿ, ಮಲ್ಕೊಂಡಿ ಮಹಾದೇವ ಸ್ವಾಮಿ, ಮಾಜಿ ಮಹಾಪೌರ ರಘೋತ್ತಮ,

ಸೇರಿದಂತೆ ದಮ್ಮಚಾರಿಗಳು, ದಮ್ಮ ಉಪಾಸಕರು, ಬುದ್ಧಿಜೀವಿಗಳು, ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳು, ಪ್ರಗತಿಪರರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಲಿದ್ದಾರೆ. ''ಮಕ್ಕಳ ಕೈಯಲ್ಲಿ ಮೊಬೈಲ್‌ಗಿಂತ ಪುಸ್ತಕ, ಮನಸ್ಸಿ ನಲ್ಲಿ ಚಟಕ್ಕಿಂತ ಚಿಂತನೆ, ಬದುಕಿನಲ್ಲಿ ಸ್ವಾರ್ಥಕ್ಕಿಂತ ಮಾನವೀಯತೆ ಇರಬೇಕು'' ಎಂಬ ಆಶಯದೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಂಘಟಕರು ಕರೆ ನೀಡಿದ್ದಾರೆ.

ಗೆದ್ದವರನ್ನು ಕಡೆಗಣಿಸಿ ಸೋತವರಿಗೆ ಮಣೆ: ಶಿಕ್ಷಕರ ಸಂಘದ ತಾಲೂಕು ಸಮಿತಿ ರಚನೆಗೆ ಆಕ್ಷೇಪ

ದೂರಿದರು.

ಈ ಕುರಿತು ರಾಜ್ಯ ಸಂಘದ ಅಧ್ಯಕ್ಷರನ್ನು ಭೇಟಿಯಾಗಿ ಮನವಿ ಸಲ್ಲಿಸಿದಾಗ, ಜಿಲ್ಲಾಧ್ಯಕ್ಷರೊಂದಿಗೆ ಚರ್ಚಿಸಿ ಸಮಿತಿ ರಚಿಸುವಂತೆ ಸೂಚಿಸುವುದಾಗಿ ತಿಳಿಸಿದ್ದರು. ಆದರೆ ರಾಜ್ಯಾಧ್ಯಕ್ಷರ ಸೂಚನೆಗೂ ಜಿಲ್ಲಾಧ್ಯಕ್ಷರು ಸ್ಪಂದಿಸದೆ, ಇದೀಗ ತಮ್ಮ ತಂಡದ 15 ವಿಜೇತರ ಪೈಕಿ ಕೇವಲ ಇಬ್ಬರನ್ನು ಹಾಗೂ ಚುನಾವಣೆಯಲ್ಲಿ ಸೋತ ಎಂಟು ಮಂದಿಯನ್ನು ಸೇರಿಸಿಕೊಂಡು ಏಕಾಏಕಿ ಅಡ್ಹಾಕ್ ಸಮಿತಿ ರಚಿಸಿ ಘೋಷಿಸಿದ್ದಾರೆ ಎಂದು ಮಾರುತಿ ಆರೋಪಿಸಿದರು.

''ಚುನಾವಣೆಯಲ್ಲಿ ಗೆದ್ದ ಬಹುಮತದ ನಿರ್ದೇಶಕರನ್ನು ಕಡೆಗಣಿಸಿ ಸೋತವರಿಗೆ ಅಧಿಕಾರ ನೀಡಿರುವುದು ಚುನಾಯಿತ ಸದಸ್ಯರಿಗೆ ಮಾಡಿದ ಅವಮಾನ. ನಿಯಮಬಾಹಿರವಾಗಿ ರಚಿಸಿರುವ ಅಡ್ಹಾಕ್ ಸಮಿತಿಯನ್ನು ಒಪ್ಪಿಕೊಳ್ಳುವುದಿಲ್ಲ'' ಎಂದು ಅವರು ಹೇಳಿದರು.

ಚುನಾವಣಾ ಫಲಿತಾಂಶದ ಆಧಾರದ ಮೇಲೆ ಚುನಾಯಿತ ನಿರ್ದೇಶಕರನ್ನೊಳಗೊಂಡ ತಾಲೂಕು ಸಮಿತಿ ರಚನೆಗೆ ಅವಕಾಶ ನೀಡಬೇಕು. ಇಲ್ಲವಾದರೆ ಈ ವಿಚಾರದಲ್ಲಿ ಮುಂದಿನ ಹಂತದಲ್ಲಿ ಕಾನೂನು ಹೋರಾಟ ನಡೆಸಲಾಗುವುದು ಎಂದು ಮಾರುತಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಗೀತಾರಾಣಿ, ವಿದ್ಯಾವತಿ, ವಿಜಯಲಕ್ಷ್ಮಿ, ಧನಲಕ್ಷ್ಮಿ, ವೀರೇಶ್, ಭೀಮ ನಾಯಕ್ ಹಾಗೂ ಮಾರೆಪ್ಪ ಉಪಸ್ಥಿತರಿದ್ದರು.

ರಾಯಚೂರು ಅಭಿವೃದ್ಧಿಗೆ ಸಚಿವ ಯತೀಂದ್ರ ಸಿದ್ದರಾಮಯ್ಯ ಜೊತೆ ಮಹತ್ವದ ಚರ್ಚೆ

ಮಂಡಳಿ (KUWS&DB) ಹಾಗೂ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (KUIDFC) ವ್ಯಾಪ್ತಿಯಲ್ಲಿನ ಯೋಜನೆಗಳ ಬಗ್ಗೆಯೂ ಸಮಾಲೋಚನೆ ನಡೆಯಿತು. ರಾಯಚೂರಿನ ನಗರಾಭಿವೃದ್ಧಿಗೆ ಅಗತ್ಯವಿರುವ ಯೋಜನೆಗಳಿಗೆ ಸರ್ಕಾರದ ಮಟ್ಟದಲ್ಲಿ ಸಹಕಾರ ಹಾಗೂ ವೇಗದ ಅನುಮೋದನೆ ದೊರೆಯುವ ನಿರೀಕ್ಷೆ ಮೂಡಿದೆ.

ಈ ಸಂದರ್ಭದಲ್ಲಿ ರವೀದ್ರನಾಥ ಪಾಟೀಲ್, ವೆಂಕಟರೆಡ್ಡಿ, ತನ್ವೀರ್ ಅಹ್ಮದ್, ಎ. ಮೀರಪ್ಪ ಖಾನಾಪುರ ಸೇರಿದಂತೆ ಹಲವು ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

ರಾಯಚೂರಿನ ಸಮಗ್ರ ಅಭಿವೃದ್ಧಿಗೆ ಸರ್ಕಾರದ ಸಹಕಾರ ಕೋರಿ ನಡೆದ ಈ ಭೇಟಿ, ಜಿಲ್ಲೆಯ ನಗರಾಭಿವೃದ್ಧಿಯ ದೃಷ್ಟಿಯಿಂದ ಮಹತ್ವ ಪಡೆದಿದೆ.

ಕಾಂಗ್ರೆಸ್ ಸರ್ಕಾರಕ್ಕೆ ರೈತರ ಮೇಲೆ ಕರುಣೆ ಇಲ್ಲ:ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ

ಕು ಮಾತ್ರ ಕಾಣಿಸುತ್ತಿದೆ.ಹಾಗಾದರೆ ಯಾದಗಿರಿ ಜಿಲ್ಲೆಯ ಉಳಿದ ತಾಲೂಕುಗಳು ಸರ್ಕಾರದ ಕಣ್ಣಿಗೆ ಕಾಣುತ್ತಿಲ್ಲವೇ ಇದು ಕರುಣೆ ಇಲ್ಲದ ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ಧೋರಣೆಗೆ ಸಾಕ್ಷಿಯಾಗಿದೆ ಎಂದು ಶ್ರೀಧರ ಸಾಹುಕಾರ ತೀವ್ರವಾಗಿ ವಾಗ್ದಾಳಿ ನಡೆಸಿದ್ದಾರೆ.ಯಾದಗಿರಿ ಜಿಲ್ಲೆಯಲ್ಲಿ ಮಳೆ ಕೊರತೆ ಹಾಗೂ ಬೆಳೆ ನಷ್ಟದ ವಾಸ್ತವಿಕ ಪರಿಸ್ಥಿತಿಯನ್ನು ಕಾಂಗ್ರೆಸ್ ಸರ್ಕಾರ ಕೂಡಲೇ ಪರಿಶೀಲಿಸಿ,ಯಾದಗಿರಿ,ವಡಗೇರಾ,ಗುರುಮಿಠಕಲ್,ಸುರಪುರ ಹಾಗೂ ಹುಣಸಗಿ ತಾಲೂಕುಗಳನ್ನು ತಕ್ಷಣ ಬರಪೀಡಿತ ತಾಲೂಕುಗಳೆಂದು ಘೋಷಿಸಬೇಕು. ರೈತರಿಗೆ ಸೂಕ್ತ ಬೆಳೆ ಪರಿಹಾರ, ಕೃಷಿ ಸಾಲ ಮರುಹೊಂದಾಣಿಕೆ,ಸಾಲ ವಸೂಲಾತಿಗೆ ತಾತ್ಕಾಲಿಕ ತಡೆ, ನರೇಗಾ ಅಡಿಯಲ್ಲಿ ನಿರಂತರ ಉದ್ಯೋಗ ಹಾಗೂ ಜಾನುವಾರುಗಳಿಗೆ ಮೇವು-ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.ಅನ್ನದಾತನ ಬದುಕಿನೊಂದಿಗೆ ಕಾಂಗ್ರೆಸ್ ಸರ್ಕಾರ ಚೆಲ್ಲಾಟವಾಡುವುದನ್ನು ಸಹಿಸಲು ಸಾಧ್ಯವಿಲ್ಲ.ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು ವಾಸ್ತವ ಪರಿಸ್ಥಿತಿಯನ್ನು ಪರಿಗಣಿಸಿ ಯಾದಗಿರಿ ಜಿಲ್ಲೆಯ ಬರಪೀಡಿತ ತಾಲೂಕುಗಳಿಗೆ ನ್ಯಾಯ ಒದಗಿಸಬೇಕು.ರೈತರ ಸಂಕಷ್ಟವನ್ನು ಇನ್ನೂ ಕಡೆಗಣಿಸಿದರೆ ಯಾದಗಿರಿ ಜಿಲ್ಲೆಯ ರೈತರ ಪರವಾಗಿ ಬಿಜೆಪಿ ಯುವಮೋರ್ಚಾ ಸರ್ಕಾರದ ವಿರುದ್ಧ ಹೋರಾಟಕ್ಕೆ ಇಳಿಯಲಿದೆ ಎಂದು ಶ್ರೀಧರ ಸಾಹುಕಾರ ಎಚ್ಚರಿಕೆ ನೀಡಿದ್ದಾರೆ.

ಹೋರಾಟಗಾರ ಉಮೇಶ್ ಮುದ್ನಾಳಗೆ ಜಿಲ್ಲಾ ಕುರುಬ ಸಂಘದಿಂದ ಸನ್ಮಾನ

ಅದರ ಪ್ರತಿಫಲವಾಗಿಯೇ ಇಂದು ಅವರಿಗೆ ಅತ್ಯುನ್ನತ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಲಭಿಸಿದ್ದು ನಮ್ಮೆಲ್ಲರಿಗೂ ಸಂತಸದ ವಿಷಯ ಅವರು ಯಾವುದೇ ಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥದಿಂದ ರೈತರು ಮತ್ತು ಸಾರ್ವಜನಿಕರ ಏಳಿಗೆಗೆ ದುಡಿಯುತ್ತಿದ್ದಾರೆ.ಅವರಿಗೆ ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಪ್ರಶಸ್ತಿಗಳು ದೊರೆಯಲಿ ಎಂದು ಹಾರೈಸಿದರು.ಈ ಸಂದರ್ಭದಲ್ಲಿ ಮಾಜಿ ಗ್ರಾಮ ಪಂಚಾಯತಿ ಸದಸ್ಯರಾದ ಬಸವರಾಜ ಕಾವಲಿ,ಹಣಮಂತರಾಯಗೌಡ ಮಾಲಿ ಪಾಟೀಲ್ ತೆಕರಾಳ,ಮಾಳಿಂಗರಾಯ ಕಂದಳ್ಳಿ, ಶಿವರಾಜ ಸಾಹು ಕುಮನೂರ,ಭೀಮಣ್ಣ ಪೂಜಾರಿ,ಪರಪ್ಪ ವಿಶ್ವಕರ್ಮ ಹಾಗೂ ಇನ್ನಿತರರು ಇದ್ದರು

ಕಮಲಾಪುರದ ಚೊಚ್ಚಲ ಪ್ರಜಾ ಸೇವೆ ಸಭೆ ಯಶಸ್ವಿ; 1,061 ಅರ್ಜಿ ಸ್ವೀಕಾರ



ಕಲಬುರಗಿ,ಸೆ.06-

ಜಿಲ್ಲೆಯ ಕಮಲಾಪುರದಲ್ಲಿ ಶನಿವಾರ ರಾಜ್ಯದ ಗೃಹ, ಐಟಿ-ಬಿಟಿ, ಇ-ಆಡಳಿತ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಶಾಸಕ ಬಸವರಾಜ ಮತ್ತಿಮೂಡ ಅವರ ಅಧ್ಯಕ್ಷತೆಯಲ್ಲಿ ನಡೆದ ಚೊಚ್ಚಲ ಪ್ರಜಾ ಸೇವೆ ಸಭೆ ಯಶಸ್ವಿಯಾಗಿದ್ದು, ವಿವಿಧ ಇಲಾಖೆಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಒಟ್ಟು 1,061 ಅರ್ಜಿಗಳು ಸಲ್ಲಿಕೆಯಾಗಿವೆ.

ಅಹವಾಲು ನಿಮ್ಮದು, ಪರಿಹಾರ ನಮ್ಮದು ಎಂಬ ಧ್ಯೇಯದೊಂದಿಗೆ ಆಯೋಜಿಸಿದ್ದ ಪ್ರಜಾ ಸೇವೆ ಸಭೆಗೆ ದೂರುದುಮ್ಮಾನಗಳನ್ನು ಹೊತ್ತುಕೊಂಡು ಬಂದ ನೂರಾರು ಸಾರ್ವಜನಿಕರ ಸಮಸ್ಯೆಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಶಾಸಕ ಬಸವರಾ ಜ ಮತ್ತಿ ಮೂಡ ಶಾಂತ'ಚಿತ್'ದಿಂದ' ಆಲಿಸಿದರು. ಮಹಿಳೆಯರು, ವೃದ್ಧರು, ವಿದ್ಯಾರ್ಥಿಗಳು, ವಿಶೇಷಚೇತನರು ಸೇರಿದಂತೆ ಎಲ್ಲ ವರ್ಗದ ಜನರ ಸಮಸ್ಯೆಗಳಿಗೆ ಕಿವಿಗೊಡುವ ಮೂಲಕ ಇದು ಆಳುವ ಸರ್ಕಾರವಲ್ಲ, ಆಲಿಸುವ ಸರ್ಕಾರ ಎಂಬುದನ್ನು ನಿರೂಪಿಸಿದರು.

ಸಭೆಯಲ್ಲಿ ಸ್ವೀಕರಿಸಲಾದ ಎಲ್ಲ ಅರ್ಜಿಗಳನ್ನು ಆದ್ಯತೆಯ ಮೇರೆಗೆ ವಿಲೇವಾರಿ ಮಾಡುವಂತೆ ಜಿಲ್ಲಾಧಿಕಾರಿಗೆ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು. ಸರ್ಕಾರದ ಆದೇಶದಂತೆ ಪ್ರತಿ ಬುಧವಾರ ಅರ್ಜಿಗಳನ್ನು ತಹಶೀಲ್ದಾರ್ ಸಹಾಯಕ ಆಯುಕ್ತ ಹಾಗೂ ಜಿಲ್ಲಾಧಿಕಾರಿ ಹಂತದಲ್ಲಿ ಪರಿಶೀಲಿಸಿ ವಿಲೇವಾರಿ ಮಾಡಬೇಕು. ಕಾನೂನಿನ ಚೌಕಟ್ಟಿನಲ್ಲಿ ಸಮಸ್ಯೆ ಬಗೆಹರಿಸಲು ಸಾಧ್ಯವಾಗದ ಅರ್ಜಿದಾರರಿಗೆ ಕಾರಣ ಸಹಿತ ಹಿಂಬರಹ ನೀಡಬೇಕು ಎಂದು ನಿರ್ದೇಶನ ನೀಡಿದರು.

ಕಂದಾಯ ಇಲಾಖೆಗೆ 526 ಅರ್ಜಿ : ಪ್ರಜಾ ಸೇವೆ ಸಭೆಯಲ್ಲಿ ಸ್ವೀಕರಿಸಲಾದ 1,061 ಅರ್ಜಿಗಳ ಪೈಕಿ ಕಂದಾಯ ಇಲಾಖೆಗೆ ಸಂಬಂಧಿಸಿದ 526 ಅರ್ಜಿಗಳು ಸಲ್ಲಿಕೆಯಾಗಿವೆ.

ಉಳಿದಂತೆ ವಸತಿ ಇಲಾಖೆಗೆ 125, ಗ್ರಾಮೀಣಾಭಿವೃದ್ಧಿ ಇಲಾಖೆಗೆ 100, ಆಹಾರ ಇಲಾಖೆಗೆ 60, ಕೆಆರ್‌ಐಡಿಎಲ್‌ಗೆ 51, ಇಂಧನ ಇಲಾಖೆಗೆ 36, ಲೋಕೋಪಯೋಗಿ ಇಲಾಖೆಗೆ 31, ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಗೆ 31, ಕೃಷಿ ಇಲಾಖೆಗೆ 21, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 19, ನೀರಾವರಿ ಇಲಾಖೆಗೆ 18, ಸಾರಿಗೆ ಇಲಾಖೆಗೆ 16, ನಗರಾಭಿವೃದ್ಧಿ ಇಲಾಖೆಗೆ 15 ಹಾಗೂ ಸಮಾಜ ಕಲ್ಯಾಣ ಇಲಾಖೆಗೆ 12 ಅರ್ಜಿಗಳು ಸಲ್ಲಿಕೆಯಾಗಿವೆ. ಉಳಿದಂತೆ ಇತರ ಇಲಾಖೆಗಳಿಗೂ ಒಂದಂಕಿಯಲ್ಲಿ ಅರ್ಜಿಗಳು ಸ್ವೀಕೃತವಾಗಿವೆ.

ಗುರುಗಳಿಂದ ಶ್ರದ್ಧೆ, ಸರಳತೆ ಕಲಿತು ಜೀವನದಲ್ಲಿ ಅಳವಡಿಸಿಕೊಳ್ಳಿ: ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯ



ಕಲಬುರಗಿ,ಸೆ.06-

ಕಲಬುರಗಿಯ ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದ ಹಾಗೂ ಛಾಯಾಗ್ರಾಹಕ ಮೊಹಮ್ಮದ್ ಅಯಾಜೋದ್ದೀನ್ ಪಟೇಲ್ ಅವರನ್ನು ಇಟಲಿಯ ವೆನಿಸ್‌ನಲ್ಲಿ ಸೆ.17ರಿಂದ 20ರವರೆಗೆ ನಡೆಯಲಿರುವ ಅಂತರರಾಷ್ಟ್ರೀಯ ಸಹಯೋಗದ ಕಲಾ ಪ್ರದರ್ಶನ ಹಾಗೂ ಶಿಲ್ಪಕಲಾ ಕಾರ್ಯಾಗಾರದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಎಸ್‌ಎಂಡಿ ಫೌಂಡೇಶನ್ ಹಾಗೂ ಹೆಚ್.ಯು. ವೆನೆಜಿಯಾ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ವೆನಿಸ್‌ನ ಹೆಚ್.ಯು. ವೆನೆಜಿಯಾ ಕ್ಯಾಂಪಿಂಗ್ ಇನ್ ಟೌನ್‌ನಲ್ಲಿ ಆರ್ಟ್ ಬಿಯಾಂಡ್ ಬಾರ್ಡರ್ಸ್: ಭಾರತ ಮತ್ತು ಇಟಲಿ ನಡುವಿನ ಸೃಜನಶೀಲ ಸಂವಾದ ಎಂಬ ವಿಶೇಷ ಮೂರು ದಿನಗಳ ಕಾರ್ಯಾಗಾರ ಆಯೋಜಿಸಲಾಗಿದೆ.

ಕರ್ನಾಟಕ, ಅಸ್ಸಾಂ, ಕೋಲ್ಕತ್ತಾ, ಮುಂಬೈ, ದೆಹಲಿ, ಮಧ್ಯಪ್ರದೇಶ ಹಾಗೂ ಬರೋಡಾ ಸೇರಿದಂತೆ ದೇಶದ ವಿವಿಧ ಭಾಗಗಳ 11 ಮಂದಿ ಗಣ್ಯ ಕಲಾವಿದರು ಹಾಗೂ ಪ್ರಮುಖ ಯುರೋಪಿಯನ್ ಕಲಾವಿದರು ಈ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ. ಕಲಬುರಗಿಯ ಖ್ಯಾತ ಕಲಾವಿದ ಮೊಹಮ್ಮದ್ ಅಯಾಜೋದ್ದೀನ್ ಪಟೇಲ್ ಕೂಡ ಪ್ರಮುಖ ಕಲಾವಿದರಾಗಿ ಪಾಲ್ಗೊಳ್ಳಲಿದ್ದಾರೆ.

ಭಾರತೀಯ ಹಾಗೂ ಯುರೋಪಿಯನ್ ಕಲಾ ಸಮುದಾಯಗಳ ನಡುವೆ ಬಾಂಧವ್ಯ ಬೆಳೆಸುವ ಉದ್ದೇಶದಿಂದ ಕಾರ್ಯಾಗಾರ ಆಯೋಜಿಸಲಾಗಿದ್ದು, ವೈವಿಧ್ಯಮಯ ಕಲಾತ್ಮಕ ದೃಷ್ಟಿಕೋನಗಳ ಕುರಿತು ಸಂವಾದ, ಸಹಯೋಗದ ಸಭೆಗಳು ಹಾಗೂ ಮುಕ್ತ ಚರ್ಚೆಗಳು ನಡೆಯಲಿವೆ. ಸೃಜನಶೀಲತೆ, ಸ್ನೇಹ ಹಾಗೂ ಅರ್ಥಪೂರ್ಣ ಸಾಂಸ್ಕೃತಿಕ ವಿನಿಮಯದ ಸಂಬಂಧಗಳನ್ನು ಬಲಪಡಿಸುವುದು ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದೆ.

15 ದಿನಗಳ ಯುರೋಪ್ ಅಧ್ಯಯನ ಪ್ರವಾಸ :

ವೆನಿಸ್‌ನ ಮೂರು ದಿನಗಳ ಕಾರ್ಯಾಗಾರದೊಂದಿಗೆ ನಿಯೋಗವು ಸೆ.9ರಿಂದ 23ರವರೆಗೆ ಫ್ರಾನ್ಸ್, ಜರ್ಮನಿ, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಸ್ವಿಜರ್ಲ್ಯಾಂಡ್, ಇಟಲಿಯ ಫ್ಲಾರೆನ್ಸ್ ಹಾಗೂ ವ್ಯಾಟಿಕನ್ ಸಿಟಿ ಸೇರಿದಂತೆ ಯುರೋಪ್‌ನ ಪ್ರಮುಖ ಸಾಂಸ್ಕೃತಿಕ ನಗರಗಳಲ್ಲಿ 15 ದಿನಗಳ ಅಧ್ಯಯನ ಪ್ರವಾಸ ಕೈಗೊಳ್ಳಲಿದೆ.

ಈ ಸಂದರ್ಭದಲ್ಲಿ ವಿಶ್ವಪ್ರಸಿದ್ಧ ವಸ್ತುಸಂಗ್ರಹಾಲಯಗಳು, ಐತಿಹಾಸಿಕ ಸ್ಮಾರಕಗಳು ಹಾಗೂ ಕಲಾ ಗ್ಯಾಲರಿಗಳಿಗೆ ಭೇಟಿ ನೀಡಲಾಗುವುದು. ಲಿಯೊನಾರ್ಡೊ ಡಾ ವಿನ್ಸಿ , ಮೈಕೆಲ್ಯಾಂಜೆಲೊ, ವಿನ್ಸೆಂಟ್ ವ್ಯಾನ್ ಗಾಗ್, ರೆಂಬ್ರಾಂಡ್ ಹಾಗೂ ಪಿಕಾಸೊ ಅವರಂತಹ ವಿಶ್ವವಿಖ್ಯಾತ ಕಲಾವಿದರ ಶ್ರೇಷ್ಠ ಕಲಾಕೃತಿಗಳನ್ನು ನೇರವಾಗಿ ವೀಕ್ಷಿಸುವ ಅವಕಾಶ ಕಲಾವಿದರಿಗೆ ದೊರೆಯಲಿದೆ.

ಅಯಾಜೋದ್ದೀನ್ ಪಟೇಲ್ ಅವರು ದಖಿನ್ ರಾಜವಂಶಗಳ ಕಲೆ, ವಾಸ್ತುಶಿಲ್ಪ ಹಾಗೂ ಇತಿಹಾಸಕ್ಕೆ ಸಂಬಂಧಿಸಿದ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. 2014ರಲ್ಲಿ ರಾಷ್ಟ್ರೀಯ ಲಲಿತಕಲಾ ಪ್ರಶಸ್ತಿ, 201617ರಲ್ಲಿ ಕೇಂದ್ರ ಸಂಸ್ಕೃತಿ ಸಚಿವಾಲಯದ ಸಿಸಿಆರ್‌ಟಿ ರಾಷ್ಟ್ರೀಯ ಫೆಲೋಶಿಪ್ ಹಾಗೂ 2018ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಿರಿಯ ಫೆಲೋಶಿಪ್ ಸೇರಿದಂತೆ ಹಲವು ಪ್ರಶಸ್ತಿ ಹಾಗೂ ಗೌರವಗಳನ್ನು ಅವರು ಪಡೆದಿದ್ದಾರೆ. ಅಲ್ಲದೆ, ತಮ್ಮದೇ ಆದ ಕಲಾ ಗ್ಯಾಲರಿ, ವಸ್ತುಸಂಗ್ರಹಾಲಯ ಹಾಗೂ ಸಂಶೋಧನಾ ಕೇಂದ್ರವನ್ನೂ ಸ್ಥಾಪಿಸಿದ್ದಾರೆ. ಅವರು ಈ ಹಿಂದೆ ಅಮೆರಿಕ ಸಂಯುಕ್ತ ಸಂಸ್ಥಾನ, ಲಂಡನ್, ರಷ್ಯಾ, ಟರ್ಕಿ, ಚೀನಾ, ಕೀನ್ಯಾ, ಹಾಂಗ್‌ಕಾಂಗ್, ಮಕಾವು, ಈಜಿಪ್ಟ್, ಜೋರ್ಡಾನ್, ಉಜ್ಬೇಕಿಸ್ತಾನ್, ಕಝಾಕಿಸ್ತಾನ್, ಶ್ರೀಲಂಕಾ, ಬಾಂಗ್ಲಾದೇಶ ಹಾಗೂ ಭೂತಾನ್ ಸೇರಿದಂತೆ ಹಲವು ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಕಲೆ, ಸಂಸ್ಕೃತಿ ಮತ್ತು ಐತಿಹಾಸಿಕ ಪರಂಪರೆಯನ್ನು ಅಧ್ಯಯನ ಮಾಡಿದ್ದಾರೆ.

ಅವರ ಕಲಾವಿದ ಸ್ನೇಹಿತರಾದ ರಾಜಶೇಖರ್ ಶಮನ್ನಾ, ಟಿ. ದೇವೇಂದ್ರ, ರೆಹಮಾನ್ ಪಟೇಲ್ ಹಾಗೂ ನಾರಾಯಣ ಜೋಶಿ ಸೇರಿದಂತೆ ಹಲವರು ಅಯಾಜೋದ್ದೀನ್ ಪಟೇಲ್ ಅವರ ಯಶಸ್ವಿ ಕಲಾ ಪಯಣಕ್ಕೆ ಶುಭ ಹಾರೈಸಿದ್ದಾರೆ.



ಉರ್ದು ಶಾಲೆಯಲ್ಲಿ 'ಶಿಕ್ಷಕರ ದಿನಾಚರಣೆ'

ಚಿಂಚೋಳಿ,ಸೆ.06-

ತಾಲೂಕಿನ ನಾಗಾಇದಲಾಯಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ಶಿಕ್ಷಕರ ದಿನಾಚರಣೆಯನ್ನು ಸಡಗರ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಲೆಯ ಮುಖ್ಯಶಿಕ್ಷಕ ಅಕ್ಬರಸಾಬ್, ಶಿಕ್ಷಣವು ಸಮಾಜದ ಬೆನ್ನೆಲುಬಾಗಿದ್ದು, ಅದನ್ನು ನೀಡುವ ಶಿಕ್ಷಕರು ದೇಶದ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳಾಗಿದ್ದಾರೆ. ಅಜ್ಞಾನದ ಕತ್ತಲೆಯನ್ನು ದೂರ ಮಾಡಿ ಜ್ಞಾನದ ಬೆಳಕು ಚೆಲ್ಲುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಮಕ್ಕಳು ಶಿಕ್ಷಕರು ತೋರಿದ ಸನ್ಮಾರ್ಗದಲ್ಲಿ ನಡೆದು ಉತ್ತಮ ಸಾಧನೆ ಮಾಡುವುದೇ ಗುರುಗಳಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಶಿಕ್ಷಕರಿಗಾಗಿ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಿ, ಶಿಕ್ಷಕರನ್ನು ಆಟಗಳಲ್ಲಿ ಭಾಗವಹಿಸುವಂತೆ ಮಾಡುವ ಮೂಲಕ ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಕಾರ್ಯಕ್ರಮದಲ್ಲಿ ಸಹ ಶಿಕ್ಷಕಿ ಕೈಲಾಸಜ್ಯೋತಿ, ಅತಿಥಿ ಶಿಕ್ಷಕರು ಹಾಗೂ ಶಾಲೆಯ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ವಡಗೇರಾ ತಾಲೂಕ ಬರ ಘೋಷಿಸಿ ರೈತರ ಸಾಲ ಮನ್ನಾ ಮಾಡುವಂತೆ:ಸಿದ್ದು ನಾಯಕ ಆಗ್ರಹ

ತುಮಕೂರು,ಹಣಮಂತ ಒಡ್ಕರ(ಸಹ ಕಾರ್ಯದರ್ಶಿಗಳು),ಮಲ್ಲು ದಾಸರ,ಶಿವು ಶಿವಪುರ,ಕಾಶಿನಾಥ ಕಲ್ಲಪ್ಪನೋ(ಸಂಘಟನಾ ಕಾರ್ಯದರ್ಶಿ),ಸಿದ್ದು ಸುಣಗಾರ, ದೇವು ಕುರಕುಂದ,ಸಿದ್ದು ಕಡೇಚೂರು,ರಹಿಮಾನ್ ತುಮಕೂರು,(ಪ್ರಧಾನ ಸಂಚಾಲಕರು) ಬಸ್ಸು ಕಂಟಿ ತಾಂಡ, ಶೈಬಾಜ್ ಹಯ್ಯಾಳ,ಭಾಗೇಶ್ ಪೂಜಾರಿ ವಡಗೇರಾ(ಸಂಚಾಲಕರು ದೇವು ನಾಯಕ ಬುಸ್ಸೇನಿ(ತಾಲೂಕು ಅಧ್ಯಕ್ಷರು ಯುವ ಘಟಕ)ಪೀರಸಾಬ ಮರಡಿ(ತಾಲೂಕು ಅಧ್ಯಕ್ಷರು ವಿದ್ಯಾರ್ಥಿ ಘಟಕ)ಮಲ್ಲಿಕಾರ್ಜುನ ಬಿಳ್ಹಾರ (ತಾಲೂಕು ಅಧ್ಯಕ್ಷರು ರೈತ ಘಟಕ)ಸುರೇಶ್ ಬಾಡದ(ನಗರಾಧ್ಯಕ್ಷರು ವಡಗೇರಾ)ಮಂಜುನಾಥ ಸಾಹುಕಾರ ಶಾರದಳ್ಳಿ(ಖಜಾಂಚಿ),ಮೊಹಮ್ಮದ್ ಖತಾಲಿ(ಸಾಮಾಜಿಕ ಜಾಲತಾಣ ಸಂಚಾಲಕರು)ದೇವು ಜಡಿ(ಮಾಧ್ಯಮ ವಕ್ತಾರರು)ಭೀಮು ಪೂಜಾರಿ (ಗ್ರಾ.ಘ.ಅಧ್ಯಕ್ಷರು ಹಯ್ಯಾಳ)ಭೀಮರಾಯ ಹಂಚಿನಾಳ(ಗ್ರಾ.ಘ.ಅಧ್ಯಕ್ಷರು ಹಂಚಿನಾಳ)ಮಲ್ಲು ಅಂಬಿಗ(ಗ್ರಾ.ಘ.ಅಧ್ಯಕ್ಷರು ಚನ್ನೂರು)ಬಾಲರಾಜ್ ವೆಂಕಟಾಪುರ (ಗ್ರಾ.ಘ.ಅಧ್ಯಕ್ಷರು ಕೊಂಕಲ)ನಾಗರಾಜ್ (ಗ್ರಾ.ಘ.ಅಧ್ಯಕ್ಷರು ಗೊಂದೇನೂರ)ರಾಜು ಕುರಿಹಾಳ(ಗ್ರಾ.ಘ.ಅಧ್ಯಕ್ಷರು ಕುರಿಹಾಳ) ರಾಮಣ್ಣ ನಾಟೇಕಾ(ಗ್ರಾ.ಘ.ಅಧ್ಯಕ್ಷರು ಹಾಲಗೇರಾ) ಇವರನ್ನು ನೇಮಿಸಲಾಯಿತು.ಈ ಸಂದರ್ಭದಲ್ಲಿ ಕರವೇ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹಣಮಂತರಾಯ ತೇಕರಾಳ,ಜಿಲ್ಲಾ ಪ್ರಧಾನ ಸಂಚಾಲಕ ಭೀಮರಾಯ ರಾಮಸಮುದ್ರ,ಹಯ್ಯಾಳ ಹೊಬಳಿ ಘಟಕ ಅಧ್ಯಕ್ಷ ಮಾಳಪ್ಪ ಪೂಜಾರಿ,ಹಾಗೂ ಕರವೇ ಪದಾಧಿಕಾರಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

ಅಫಜಲಪುರ ಸರ್ಕಾರಿ ಆಸ್ಪತ್ರೆಯಲ್ಲಿ ಅವ್ಯವಹಾರ ಆರೋಪ: ಸಮಗ್ರ ತನಿಖೆಗೆ ಜೆಡಿಎಸ್ ಆಗ್ರಹ



ಅಫಜಲಪುರ,ಸೆ.06-

ಪಟ್ಟಣದ ಸರ್ಕಾರಿ ಆಸ್ಪತ್ರೆ ಹಾಗೂ ಕಲಬುರಗಿಯ ಶಾಂತಾ ಆಸ್ಪತ್ರೆಯ ಹೊರರೋಗಿ ವಿಭಾಗ (ಒಪಿಡಿ) ಮತ್ತು ಒಳರೋಗಿಗಳ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ತಾಳೆ ಹಾಕುವ ಮೂಲಕ ತನಿಖೆ ನಡೆಸಬೇಕು ಎಂದು ಜೆಡಿಎಸ್ ರಾಜ್ಯ ಒಬಿಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ ನಾಟಿಕಾರ ಆಗ್ರಹಿಸಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಯಲ್ಲಿ ಸೌಲಭ್ಯಗಳಿಲ್ಲ ಎಂಬ ಕಾರಣ ನೀಡಿ ಬಡ ರೋಗಿಗಳನ್ನು ಕಲಬುರಗಿಯ ಖಾಸಗಿ ಆಸ್ಪತ್ರೆಗೆ ರೆಫರ್ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬರುತ್ತಿದೆ. ಸರ್ಕಾರಿ ಆಸ್ಪತ್ರೆಯಿಂದ ಖಾಸಗಿ ಆಸ್ಪತ್ರೆಗೆ ರೆಫರ್ ಮಾಡಲಾದ ರೋಗಿಗಳ ವಿವರ, ಆಯುಷ್ಮಾನ್ ಭಾರತ ಯೋಜನೆಯಡಿ ನಡೆದ ಚಿಕಿತ್ಸೆಗಳ ದಾಖಲೆ ಹಾಗೂ ಎರಡೂ ಆಸ್ಪತ್ರೆಗಳ ಚಿಕಿತ್ಸಾ ವಿವರಗಳನ್ನು ಪರಿಶೀಲಿಸಿದರೆ ಆರೋಗ್ಯ ಸೇವೆ ಮತ್ತು ಸರ್ಕಾರಿ ಅನುದಾನ ದುರ್ಬಳಕೆಯಾಗಿದೆ ಎಂಬ ಆರೋಪಗಳ ಸತ್ಯಾಸತ್ಯತೆ ಬಹಿರಂಗವಾಗಲಿದೆ ಎಂದರು.

ಸರ್ಕಾರಿ ಆಸ್ಪತ್ರೆಯ ಕೆಲ ವೈದ್ಯರು ಹಾಗೂ ಖಾಸಗಿ ಆಸ್ಪತ್ರೆಯ ನಡುವೆ ಒಳಒಪ್ಪಂದವಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಖಾಸಗಿ ಆಸ್ಪತ್ರೆಗೆ ರೋಗಿಗಳನ್ನು ಕಳುಹಿಸುವ ವೈದ್ಯರಿಗೆ ಕರ್ತವ್ಯದಲ್ಲಿ ವಿನಾಯಿತಿ ನೀಡಲಾಗುತ್ತಿದೆ ಎಂಬ ಆರೋಪವೂ ಇದೆ. ಈ ಕುರಿತು ಆರೋಗ್ಯ ಇಲಾಖೆಯ ಉನ್ನತಾಧಿಕಾರಿಗಳು ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗದೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಆಸ್ಪತ್ರೆಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿಲ್ಲ. ಆರ್‌ಒ ಪ್ಲಾಂಟ್ ಅಳವಡಿಸಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಒಂದೇ ಸಂಸ್ಥೆಗೆ ಪಥ್ಯಾಹಾರ ಪೂರೈಕೆ ಟೆಂಡರ್ ನೀಡಲಾಗಿದ್ದು, ₹77 ಲಕ್ಷಕ್ಕೂ ಅಧಿಕ ಮೊತ್ತದ ಅನುದಾನದಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪವಿದೆ ಎಂದು ಹೇಳಿದರು. ಆಸ್ಪತ್ರೆಯ ತಜ್ಞ ವೈದ್ಯರ ಸಮಯ ಪಾಲನೆ, ರಾತ್ರಿ ಕರ್ತವ್ಯದಲ್ಲಿರುವ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳ ಹಾಜರಾತಿ, ಐಸಿಯು ಸೌಲಭ್ಯ ಹಾಗೂ ಕರ್ನಾಟಕ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ () ಹಾಜರಾತಿಯನ್ನು ಪರಿಶೀಲಿಸಬೇಕು ಎಂದು ನಾಟಿಕಾರ ಆಗ್ರಹಿಸಿದರು.

ಔಷಧಿ ಖರೀದಿಯಲ್ಲೂ ಕಮಿಷನ್ ಆರೋಪ : ಆಸ್ಪತ್ರೆಯ ಔಷಧಿ ಖರೀದಿಯಲ್ಲಿಯೂ ಅಕ್ರಮದ ಆರೋಪಗಳಿವೆ. ಕಲಬುರಗಿಯಲ್ಲಿ ಕಡಿಮೆ ದರಕ್ಕೆ ದೊರೆಯುವ ಔಷಧಿಗಳನ್ನು ತುಮಕೂರು, ರಾಮನಗರ ಹಾಗೂ ಬೆಂಗಳೂರು ಭಾಗಗಳಿಂದ ಖರೀದಿಸುವ ಅಗತ್ಯ ವೇನಿತ್ತು ಎಂಬುದನ್ನು ಪರಿಶೀಲಿಸಬೇಕು. ಈ ಖರೀದಿ ಪ್ರಕ್ರಿಯೆಯಲ್ಲಿ ಕಮಿಷನ್ ವ್ಯವಹಾರ ನಡೆದಿದೆಯೇ ಎಂಬುದನ್ನು ತನಿಖಾ ಅಧಿಕಾರಿಗಳು ಪತ್ತೆಹಚ್ಚಬೇಕು ಎಂದು ನಾಟಿಕಾರ ಹೇಳಿದರು. ಕಳೆದ ಎರಡು ತಿಂಗಳಿಂದ ಪಥ್ಯಾಹಾರಕ್ಕೆ ಸಂಬಂಧಿಸಿದ ಅವ್ಯವಹಾರದ ಆರೋಪಗಳು ಕೇಳಿಬರುತ್ತಿದ್ದರೂ ಶಾಸಕ ಎಂ.ವೈ. ಪಾಟೀಲ್ ಅವರು ಈ ಕುರಿತು ಮೌನ ವಹಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಅವರು ಹೇಳಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ತಾಪಮಾನ ಏರಿಕೆಗೆ ಬದುಕಿನ ಬೆಲೆ ತೆರುವವರು ಯಾರು?

ಭೂಮಿಗೆ ನಮ್ಮ ಅಗತ್ಯವಿಲ್ಲ, ನಮಗೆ ಭೂಮಿಯ ಅಗತ್ಯವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ತಾಪಮಾನ ಏರಿಕೆಯ ಜಗತ್ತಿನಲ್ಲಿ ನಮಗೆ ಬೇಕಾಗಿರುವುದು ಕೇವಲ ಹೊಸ ತಂತ್ರಜ್ಞಾನಗಳಲ್ಲ. ಹೊಸ ರಾಜಕೀಯ ದೃಷ್ಟಿಕೋನ ಎಂಬುದನ್ನು ಅರಿಯಬೇಕು. ಪ್ರಕೃತಿಯ ಮೇಲೆ ಅಧಿಕಾರ ಸಾಧಿಸುವ ಮನೋಭಾವದಿಂದ ಹೊರಬಂದು, ಪ್ರಕೃತಿಯೊಂದಿಗೆ ಬದುಕುವ ಮಾರ್ಗವನ್ನು ಕಲಿಯಬೇಕು.

ಭೂಮಿಯ ಸರಾಸರಿ ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್ ಒಳಗೆ ನಿಯಂತ್ರಿಸುವ ಪ್ಯಾರಿಸ್ ಹವಾಮಾನ ಒಪ್ಪಂದದ ಗುರಿ ಈಗ ಕೈತಪ್ಪುತ್ತಿದೆ. ತಾಪಮಾನ ನಿಯಂತ್ರಣದ ಜಾಗತಿಕ ಕನಸು ಬಹುತೇಕ ಕೈಜಾರಿದೆ ಎಂದು ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ () ಇತ್ತೀಚಿನ ವರದಿ ಎಚ್ಚರಿಸಿದೆ. ಕಳೆದ ಕೆಲವು ವರ್ಷಗಳಲ್ಲಿ ಜಾಗತಿಕ ತಾಪಮಾನವು ಅಪಾಯದ ಗಡಿ ದಾಟಿರುವುದು, ಮಾನವಕುಲ ಈಗ ಹವಾಮಾನ ಬದಲಾವಣೆಯ ಹೊಸ ಮತ್ತು ಅನಿಶ್ಚಿತ ಹಂತಕ್ಕೆ ಪ್ರವೇಶಿಸಿರುವುದರ ಸಂಕೇತವಾಗಿದೆ.

ತಾಪಮಾನ ನಿಯಂತ್ರಣದಲ್ಲಿ 1.5 ಡಿಗ್ರಿ ಎಂಬುದು ಕೇವಲ ವಿಜ್ಞಾನಿಗಳ ಲೆಕ್ಕಾಚಾರವಲ್ಲ; ಅದು ಲಕ್ಷಾಂತರ ಜನರ ಬದುಕು, ಕೃಷಿ, ನೀರು, ಆರೋಗ್ಯ ಮತ್ತು ಭವಿಷ್ಯದ ಭದ್ರತೆಯ ಗಡಿ. ಕೆಲವು ವರ್ಷಗಳ ಹಿಂದೆ ಹವಾಮಾನ ಬದಲಾವಣೆಯನ್ನು ಭವಿಷ್ಯದ ಸಮಸ್ಯೆ ಎಂದು ಹೇಳಲಾಗುತ್ತಿತ್ತು. ಆದರೆ, ಈಗ ಅದು ವರ್ತಮಾನದ ಸಂಕಟವಾಗಿದೆ. ಯುರೋಪ್, ಅಮೆರಿಕ, ಆಸ್ಟ್ರೇಲಿಯಾದಲ್ಲಿ ಉಂಟಾಗುತ್ತಿರುವ ತೀವ್ರ ಉಷ್ಣ ಅಲೆಗಳು, ಏಷ್ಯಾದಲ್ಲಿ ಸಂಭವಿಸುತ್ತಿರುವ ಅತಿವೃಷ್ಟಿ ಮತ್ತು ಪ್ರವಾಹಗಳು, ಹಿಮಾಲಯ ಪ್ರದೇಶದಲ್ಲಿ ಹೆಚ್ಚುತ್ತಿರುವ ಹಠಾತ್ ಪ್ರವಾಹಗಳು- ಇವೆಲ್ಲವೂ ಹವಾಮಾನ ಬದಲಾವಣೆಯ ಪರಿಣಾಮಗಳು ದೂರದ ಭವಿಷ್ಯದಲ್ಲಿಲ್ಲ. ನಮ್ಮ ಕಣ್ಣೆದುರೇ ಇವೆ ಎಂಬುದನ್ನು ತೋರಿಸುತ್ತಿವೆ.

ಪ್ರಶ್ನೆ ಈಗ ಭೂಮಿ ಬಿಸಿಯಾಗುತ್ತದೆಯೇ? ಎಂಬುದಲ್ಲ. ಅದು ಈಗಾಗಲೇ ಬಿಸಿಯಾಗಿದೆ. ಅಂದರೆ, ಈಗಿರುವ ಪ್ರಶ್ನೆ ಈ ಬಿಸಿಯಾಗುತ್ತಿರುವ ಜಗತ್ತಿನಲ್ಲಿ ಯಾರು ಸುರಕ್ಷಿತವಾಗಿರುತ್ತಾರೆ ಮತ್ತು ಯಾರು ಅದಕ್ಕೆ ಬೆಲೆ ತೆರುತ್ತಾರೆ? ಎಂಬುದಷ್ಟೇ

ತಾಪಮಾನ ಏರಿಕೆಯ ಬಗ್ಗೆ ಚರ್ಚಿಸುವಾಗ ಸಾಮಾನ್ಯವಾಗಿ ಕಾರ್ಬನ್ ಹೊರಸೂಸುವಿಕೆ, ಕೈಗಾರಿಕೆಗಳು, ಇಂಧನ ಬಳಕೆ ಹಾಗೂ ತಂತ್ರಜ್ಞಾನಗಳ ಬಗ್ಗೆ ಮಾತನಾಡುತ್ತೇವೆ. ಆದರೆ, ಹವಾಮಾನ ಬದಲಾವಣೆಯ ಹೊಡೆತ ಯಾರ ಮೇಲೆ ಬೀಳುತ್ತದೆ ಎಂಬುದರ ಬಗ್ಗೆ ತೀರಾ ಕಡಿಮೆ ಚರ್ಚೆಗಳನ್ನು ಮಾಡುತ್ತೇವೆ. ಯಾಕೆಂದರೆ, ಹವಾಮಾನ ಬದಲಾವಣೆಯ ಹೊಡೆತ ಬೀಳುವುದು ತಾಪಮಾನ ಏರಿಕೆಗೆ ಅತೀ ಕಡಿಮೆ ಕೊಡುಗೆ ನೀಡಿದ ಜನರ ಮೇಲೆ. ಆ ಜನರು ಜಗತ್ತಿಗೆ, ಆಳುವವರಿಗೆ ಮುಖ್ಯವೇ ಅಲ್ಲ!

ಪ್ರಸ್ತುತ ಸಂದರ್ಭದಲ್ಲಿ; ಒಂದೆಡೆ, ಸಣ್ಣ ರೈತರು ತಮ್ಮ ಹೊಲದಲ್ಲಿ ಮಳೆಯ ನಿರೀಕ್ಷೆಯಲ್ಲಿ ಕುಳಿತಿದ್ದಾರೆ. ಮಳೆಗಾಗಿ ಪ್ರಾರ್ಥಿಸುತ್ತಿದ್ದಾರೆ. ಅವರೆಲ್ಲರೂ ಬರದ ಕರಿನೆರಳಿಗೆ ಸಿಲುಕಿದ್ದಾರೆ. ಮತ್ತೊಂದೆಡೆ, ಅತಿವೃಷ್ಟಿಯ ಅಬ್ಬರ ಹೆಚ್ಚಾಗಿದೆ. ಬೆಳೆ, ಭೂಮಿ, ಮನೆಗಳು ಕೊಚ್ಚಿಹೋಗುತ್ತಿವೆ. ಈ ಪರಿಸ್ಥಿತಿಯಲ್ಲಿ ಬೆಳೆ ಬೆಳೆಯುವ ಕಾಲದ ಲೆಕ್ಕಾಚಾರವೇ ಬದಲಾಗುತ್ತಿದೆ. ಸಾವಿರಾರು ವರ್ಷಗಳಿಂದ ಪ್ರಕೃತಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬಂದ ಕೃಷಿ ಜ್ಞಾನ ಈಗ ಅನಿಶ್ಚಿತ ಹವಾಮಾನದ ಮುಂದೆ ಅಸಹಾಯಕವಾಗಿ ನಿಂತಿದೆ.

ನಗರಗಳಲ್ಲಿಯೂ ಪರಿಸ್ಥಿತಿ ಭಿನ್ನವಾಗಿಲ್ಲ. ಕಾಂಕ್ರೀಟ್ ಕಾಡುಗಳಾಗಿ ಬದಲಾಗುತ್ತಿರುವ ನಗರಗಳು ಹೀಟ್ ಐಲ್ಯಾಂಡ್‌ಗಳಾಗುತ್ತಿವೆ. ಮರಗಳನ್ನು ಕತ್ತರಿಸಿ, ಕೆರೆಗಳನ್ನು ಮುಚ್ಚಿ, ಗಾಳಿಯ ಹರಿವನ್ನು ತಡೆದು ನಿರ್ಮಿಸಿದ ನಗರಗಳಲ್ಲಿ ಬಡವರು ಹೆಚ್ಚು ಬಿಸಿಲನ್ನು ಅನುಭವಿಸುತ್ತಿದ್ದಾರೆ.

ಹವಾನಿಯಂತ್ರಣ ಹೊಂದಿರುವವರು ಮನೆಯೊಳಗೆ ತಮ್ಮನ್ನು ರಕ್ಷಿಸಿಕೊಳ್ಳಬಹುದು. ಆದರೆ, ರಸ್ತೆ ಬದಿಯಲ್ಲಿ ಕೆಲಸ ಮಾಡುವ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಬೀದಿ ವ್ಯಾಪಾರಿಗಳು ಅಥವಾ ರೈತರಿಗೆ ಬಿಸಿಲಿನಿಂದ ತಪ್ಪಿಸಿಕೊಳ್ಳುವ ಅವಕಾಶ ಎಲ್ಲಿದೆ?

ಅತಿ ಕಡಿಮೆ ಮಾಲಿನ್ಯ ಸೃಷ್ಟಿಸುವವರು ಅತಿ ಹೆಚ್ಚು ಪರಿಣಾಮ ಅನುಭವಿಸುತ್ತಿದ್ದಾರೆ- ಇದು ಹವಾಮಾನ ಬದಲಾವಣೆಯ ದೊಡ್ಡ ವ್ಯಂಗ್ಯ!

ಪ್ರಸ್ತುತ, ಜಾಗತಿಕ ತಾಪಮಾನವು ಸರಾಸರಿ 17 ಇದೆ. ಭಾರತದಲ್ಲಿನ ಸರಾಸರಿ ತಾಪಮಾನ 25 ಸುತ್ತಮುತ್ತ ಇದೆ. ಜಾಗತಿಕ ತಾಪಮಾನವು ಕಳೆದ ದಶಕಕ್ಕೆ ಹೋಲಿಸಿದರೆ 1.5 ಡಿಗ್ರಿಗಿಂತ ಹೆಚ್ಚಾಗಿದೆ. ಸುಮಾರು 2-3ರಷ್ಟು ಏರಿಕೆಯಾಗಿರುವ ಅನುಭವವಾಗುತ್ತಿದೆ. ಈ ಸ್ಥಿತಿಯಲ್ಲಿ ತಾಪಮಾನ ನಿಯಂತ್ರಣಕ್ಕಾಗಿನ ಹೋರಾಟವನ್ನು ನಿಲ್ಲಿಸಲು ಸಾಧ್ಯವಿಲ್ಲ. ತಾಪಮಾನ ಏರಿಕೆಯನ್ನು ಎಷ್ಟು ಕಡಿಮೆ ಮತ್ತು ಎಷ್ಟು ಕಡಿಮೆ ಅವಧಿಗೆ ಮಿತಿಗೊಳಿಸಬಹುದು ಎಂಬುದೇ ಈಗಿನ ಗುರಿಯಾಗಬೇಕು. ಇದನ್ನು ವಿಶ್ವಸಂಸ್ಥೆ ಕೂಡ ಹೇಳಿದೆ.

ಪ್ರತಿ ಒಂದು ಡಿಗ್ರಿಯ ಹೆಚ್ಚಳವೂ ಅಪಾಯವನ್ನು ಹೆಚ್ಚಿಸುತ್ತದೆ. ಹಿಮನದಿಗಳು ವೇಗವಾಗಿ ಕರಗುತ್ತವೆ. ಸಮುದ್ರ ಮಟ್ಟ ಏರುತ್ತದೆ. ಕರಾವಳಿ ಪ್ರದೇಶಗಳಲ್ಲಿ ವಾಸಿಸುವ ಜನರ ಬದುಕು ಅಸ್ಥಿರವಾಗುತ್ತದೆ. ನೀರಿನ ಮೂಲಗಳು ಬದಲಾಗುತ್ತವೆ. ಕೆಲವು ಪ್ರದೇಶಗಳಲ್ಲಿ ಮಳೆ ಹೆಚ್ಚಾದರೆ, ಇನ್ನೂ ಕೆಲವು ಪ್ರದೇಶಗಳು ಬರದಿಂದ ನರಳುತ್ತವೆ.

ಹಿಮಾಲಯದ ಹಿಮನದಿಗಳ ಕರಗುವಿಕೆ, ಅಮೆಜಾನ್ ಕಾಡುಗಳ ನಾಶ, ಸಮುದ್ರದ ಜೀವವೈವಿಧ್ಯದ ಕುಸಿತ- ಇವೆಲ್ಲವೂ ಭೂಮಿಯ ಸಮತೋಲನಕ್ಕೆ ದೊಡ್ಡ ಸವಾಲುಗಳಾಗಿವೆ. ಹವಾಮಾನ ವಿಜ್ಞಾನಿಗಳು ಟಿಪ್ಪಿಂಗ್ ಪಾಯಿಂಟ್‌ಗಳ (ನಿರ್ಣಾಯಕ ತಿರುವು) ಬಗ್ಗೆ ಎಚ್ಚರಿಸುತ್ತಿದ್ದಾರೆ. ಪ್ರಕೃತಿ ವ್ಯವಸ್ಥೆಗಳು ಒಂದು ನಿರ್ದಿಷ್ಟ ಮಿತಿಯನ್ನು ದಾಟಿದ ನಂತರ ಹಿಂದಕ್ಕೆ ತಿರುಗಿಸಲಾಗದ ಸ್ಥಿತಿಗೆ ಹೋಗಬಹುದು ಎಂಬುದು ಅವರ ಕಳವಳ.

ಹವಾಮಾನ ಬದಲಾವಣೆಯ ಚರ್ಚೆಯಲ್ಲಿ ನಾವು ಒಂದು ಪ್ರಶ್ನೆಯನ್ನು ಕೇಳಿಕೊಳ್ಳಲೇಬೇಕು. ಅದು; ಇಂದಿನ ಅಭಿವೃದ್ಧಿಯ ಮಾದರಿ ಯಾರಿಗಾಗಿ?

ಒಂದು ನಗರದಲ್ಲಿ ಹೊಸ ರಸ್ತೆ ನಿರ್ಮಾಣಕ್ಕಾಗಿ ಮರಗಳನ್ನು ಕಡಿಯಲಾಗುತ್ತದೆ. ಹೊಸ ಕಟ್ಟಡಗಳಿಗಾಗಿ ಕೆರೆಗಳನ್ನು ಮುಚ್ಚಲಾಗುತ್ತದೆ. ಹೆಚ್ಚಿನ ಉತ್ಪಾದನೆಗಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಅತಿಯಾಗಿ ಬಳಸಲಾಗುತ್ತದೆ. ಇವೆಲ್ಲವೂ ಆರ್ಥಿಕ ಬೆಳವಣಿಗೆಯ ಸಂಕೇತಗಳಾಗಿ ಕಾಣಬಹುದು. ಆದರೆ, ಅದರ ಪರಿಣಾಮವಾಗಿ ಉಂಟಾಗುವ ಉಷ್ಣತೆ, ಪ್ರವಾಹ, ನೀರಿನ ಕೊರತೆ ಹಾಗೂ ಆರೋಗ್ಯ ಸಮಸ್ಯೆಗಳ ಹೊರೆ ಯಾರ ಮೇಲೆ ಬೀಳುತ್ತದೆ?

ಪ್ರಕೃತಿಯ ನಾಶದ ಲಾಭ ಕೆಲವರಿಗೆ ಸಿಗುತ್ತದೆ. ಆದರೆ, ಅದರ ನಷ್ಟವನ್ನು ಸಮಾಜದ ಎಲ್ಲರೂ ಹೊರುತ್ತಾರೆ. ನೇಪಾಳದಂತಹ ದೇಶಗಳು ಹವಾಮಾನ ಬದಲಾವಣೆಯ ಪರಿಣಾಮಗಳಿಗೆ ದೊಡ್ಡ ಬೆಲೆ ಕಟ್ಟುತ್ತಿವೆ. ಆದರೆ, ಜಾಗತಿಕ ತಾಪಮಾನ ಏರಿಕೆಗೆ ಅವುಗಳ ಕೊಡುಗೆ ಅತ್ಯಂತ ಕಡಿಮೆ.

ಆದ್ದರಿಂದಲೇ, ಹವಾಮಾನ ನ್ಯಾಯ ಎಂಬ ಪರಿಕಲ್ಪನೆ ಮಹತ್ವ ಪಡೆಯುತ್ತದೆ. ಕೈಗಾರಿಕಾ ಕ್ರಾಂತಿಯ ನಂತರ ಹೆಚ್ಚು ಪ್ರಮಾಣದಲ್ಲಿ ಕಾರ್ಬನ್ ಹೊರಸೂಸಿದ ಶ್ರೀಮಂತ ರಾಷ್ಟ್ರಗಳು ಹೆಚ್ಚು ಜವಾಬ್ದಾರಿ ಹೊರುವ ಅಗತ್ಯವಿದೆ ಎಂಬುದು ಅಭಿವೃದ್ಧಿಶೀಲ ರಾಷ್ಟ್ರಗಳು ವಾದಿಸುತ್ತಿವೆ.

2022ರಲ್ಲಿ ಸ್ಥಾಪಿಸಲಾದ ನಷ್ಟ ಮತ್ತು ಹಾನಿ ಪರಿಹಾರ ನಿಧಿ ಹವಾಮಾನ ವಿಪತ್ತುಗಳಿಂದ ಹಾನಿಗೊಳಗಾದ ದೇಶಗಳಿಗೆ ನೆರವು ನೀಡುವ ಉದ್ದೇಶ ಹೊಂದಿದೆ. ಆದರೆ, ಅದರಲ್ಲಿರುವ ಹಣ ಮತ್ತು ಅಗತ್ಯವಿರುವ ನೆರವಿನ ನಡುವಿನ ಅಂತರ ದೊಡ್ಡದಾಗಿದೆ. ಕಳೆದೊಂದು ವಾರದಿಂದ ಹಿಮ ಕುಸಿತ ಮತ್ತು ಪ್ರವಾಹಕ್ಕೆ ತುತ್ತಾಗಿರುವ ನೇಪಾಳದ ಪುನರ್ನಿರ್ಮಾಣಕ್ಕೆ ಸುಮಾರು 400ರಿಂದ 500 ಕೋಟಿ ಡಾಲರ್ ಹಣಬೇಕೆಂದು ಅಂದಾಜಿಸಲಾಗಿದೆ. ಆದರೆ, ಪರಿಹಾರ ನಿಧಿಯಲ್ಲಿ ಲಭ್ಯವಿರುವುದು ಕೇವಲ 35 ಕೋಟಿ ಡಾಲರ್‌ಗಳು ಮಾತ್ರ. ಪರಿಹಾರ ನಿಧಿಯಲ್ಲಿ ನೇಪಾಳಕ್ಕೆ ಬೇಕಿರುವ 10% ಹಣವೂ ಇಲ್ಲ. ಇದು ಇಂದಿನ ಜಾಗತಿಕ ತಾಪಮಾನ, ಅದರಿಂದಾಗುತ್ತಿರುವ ಪರಿಣಾಮ ಹಾಗೂ ಪರಿಹಾರದ ನಡುವಿನ ಆತಂಕವನ್ನು ಎತ್ತಿ ತೋರುತ್ತದೆ.

ತಾಪಮಾನ ಏರಿಕೆಯನ್ನು ತಡೆಯಲು ತಂತ್ರಜ್ಞಾನ ಬಳಸಲು ಜಗತ್ತು ಎದುರು ನೋಡುತ್ತಿದೆ. ಅದಕ್ಕಾಗಿ, ಕಾರ್ಬನ್ ಸೆರೆಹಿಡಿಯುವ ತಂತ್ರಜ್ಞಾನ, ನವೀಕರಿಸಬಹುದಾದ ಇಂಧನ, ಹಸಿರು ತಂತ್ರಜ್ಞಾನವನ್ನು ಬಳಸುತ್ತಿದೆ. ಇವೆಲ್ಲವೂ ಅಗತ್ಯವೂ ಕೂಡ. ಆದರೆ, ತಂತ್ರಜ್ಞಾನ ಮಾತ್ರ ಈ ಸಮಸ್ಯೆಗೆ ಪರಿಹಾರ ನೀಡಲು ಸಾಧ್ಯವಿಲ್ಲ.

ಮುಖ್ಯವಾಗಿ, ಪ್ರಕೃತಿಯನ್ನು ಕೇವಲ ಸಂಪನ್ಮೂಲ ಎಂದು ನೋಡುವ ದೃಷ್ಟಿಕೋನ ಬದಲಾಗಬೇಕು. ಕಾಡುಗಳು ಕೇವಲ ಮರಗಳಲ್ಲ. ಅವು ನೀರಿನ ಮೂಲಗಳು. ನದಿಗಳು ಕೇವಲ ನೀರಿನ ಹರಿವುಗಳಲ್ಲ. ಅವು ನಾಗರಿಕತೆಗಳ ಜೀವನಾಡಿಗಳು. ಕೃಷಿ ಕೇವಲ ಆರ್ಥಿಕ ಚಟುವಟಿಕೆಯಲ್ಲ. ಅದು ಆಹಾರದ ಭದ್ರತೆ.

ಇದೆಲ್ಲವನ್ನೂ ಅರ್ಥ ಮಾಡಿಕೊಂಡರೆ, ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟ ಕೇವಲ ಕಾರ್ಬನ್ ಕಡಿಮೆ ಮಾಡುವ ಹೋರಾಟವಲ್ಲ ಎಂಬುದು ಅರ್ಥವಾಗುತ್ತದೆ.

ಈಗ, ತಾಪಮಾನದಲ್ಲಿನ ಏರಿಕೆಯು 1.5 ಡಿಗ್ರಿಗಿಂತ ಹೆಚ್ಚು ಏರಿಕೆ ಕಂಡಿದೆ. ಈಗಲೂ ಮನುಕುಲಕ್ಕೆ ಎಚ್ಚೆತ್ತುಕೊಳ್ಳುವ ಆಯ್ಕೆಗಳಿವೆ. ಹಾನಿಯನ್ನು ಕಡಿಮೆ ಮಾಡುವುದು, ದುರ್ಬಲರನ್ನು ರಕ್ಷಿಸುವುದು ಹಾಗೂ ಹವಾಮಾನ ನ್ಯಾಯವನ್ನು ಅಭಿವೃದ್ಧಿಯ ಕೇಂದ್ರವಾಗಿಸಬೇಕಿದೆ.

ಜೊತೆಗೆ, ಭೂಮಿಗೆ ನಮ್ಮ ಅಗತ್ಯವಿಲ್ಲ. ಆದರೆ ನಮಗೆ ಭೂಮಿಯ ಅಗತ್ಯವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ತಾಪಮಾನ ಏರಿಕೆಯ ಜಗತ್ತಿನಲ್ಲಿ ನಮಗೆ ಬೇಕಾಗಿರುವುದು ಕೇವಲ ಹೊಸ ತಂತ್ರಜ್ಞಾನಗಳಲ್ಲ. ಹೊಸ ರಾಜಕೀಯ ದೃಷ್ಟಿಕೋನ ಎಂಬುದನ್ನು ಅರಿಯಬೇಕು. ಪ್ರಕೃತಿಯ ಮೇಲೆ ಅಧಿಕಾರ ಸಾಧಿಸುವ ಮನೋಭಾವದಿಂದ ಹೊರಬಂದು, ಪ್ರಕೃತಿಯೊಂದಿಗೆ ಬದುಕುವ ಮಾರ್ಗವನ್ನು ಕಲಿಯಬೇಕು.

ಇಲ್ಲದಿದ್ದರೆ, ಭವಿಷ್ಯದ ಇತಿಹಾಸದಲ್ಲಿ ಹವಾಮಾನ ಬದಲಾವಣೆ ಕೇವಲ ಪ್ರಕೃತಿಯ ದುರಂತವಾಗಿ ದಾಖಲಾಗುವುದಿಲ್ಲ. ಅದು ಮಾನವ ಸಮಾಜವು ತನ್ನದೇ ಎಚ್ಚರಿಕೆಗಳ ಹೊರತಾಗಿಯೂ ತನ್ನದೇ ಕೃತ್ಯಗಳಿಂದ ನಾಶವಾದ ಕಥೆಯಾಗಿ ದಾಖಲಾಗುತ್ತದೆ.

ಗೌರಿ ಲಂಕೇಶ್ ಜೆನ್ ಝಿ ಪೀಳಿಗೆಯ ಕನಸು ಕಂಡಿದ್ದ ದತ್ತು ತಾಯಿ!

ಒಂದಂತೂ ಸತ್ಯ, ಯಾವ ಯುವಪೀಳಿಗೆಯ ಮೇಲೆ ಕನಸು ನೆಟ್ಟು, ತನ್ನ ಕೈಲಾದ ಮಟ್ಟಿಗೆ ಆ ದನಿಗಳನ್ನು ಬೆಂಬಲಿಸಲು ಗೌರಿ ಯತ್ನಿಸಿದ್ದರೋ, ಆ ಭರವಸೆ ಇಂದು ಜೆನ್ ಝೀ ಹೋರಾಟದ ರೂಪಾಂತರದಲ್ಲಿ ದಿಟಗೊಂಡಿದೆ. ಅಕಸ್ಮಾತ್ ಜೆನ್ ಝಿ ಚಳವಳಿಯ ಕಾಲದಲ್ಲಿ ಗೌರಿಯವರು ಇದ್ದಿದ್ದರೆ, ದಿಲ್ಲಿಯ ಜಂತರ್‌ಮಂತರ್‌ನಲ್ಲಿ ಆ ಮಕ್ಕಳೊಟ್ಟಿಗೆ ಪಟ್ಟುಹಿಡಿದು ಕೂರುತ್ತಿದ್ದರು.

ಅವತ್ತು ಆಫೀಸಿನಲ್ಲಿ ಅಷ್ಟೇನು ಕೆಲಸವಿರಲಿಲ್ಲ. ಮ್ಯಾನೇಜರ್ ರಾಜು ಅವರ ಟೇಬಲ್ ಮುಂದೆ ನಾನು, ರಾಜು ಮತ್ತು ಶಿವಸುಂದರ್ ಅವರು ಮಾತಿಗೆ ತೊಡಗಿದ್ದೆವು. ಎರಡು ದಿನಗಳ ಹಿಂದಷ್ಟೇ ದಿಲ್ಲಿಯಿಂದ ಬಂದಿದ್ದ ಕನ್ಹಯ್ಯ ಕುಮಾರ್ (ಅಥವಾ ಜಿಗ್ನೇಶ್ ಮೇವಾನಿ, ನನಗೆ ಸರಿಯಾಗಿ ನೆನಪಿಲ್ಲ) ಅವರನ್ನು ತಮ್ಮ ಮನೆಯಲ್ಲೇ ಇರಿಸಿಕೊಂಡಿದ್ದ ಗೌರಿ ಮೇಡಂ, ಬೆಂಗಳೂರಿನಲ್ಲಿ ಶಾಪಿಂಗ್ ಮಾಡಿಸಿ, ಒಂದೆರಡು ಜೊತೆ ಬಟ್ಟೆ ಕೊಡಿಸಿ ಕಳಿಸಿದ್ದರು. ಅದನ್ನು ತಮ್ಮ ಸಂಪಾದಕೀಯದಲ್ಲಿ ದತ್ತುಮಗನಿಗೆ ಬಟ್ಟೆ ಕೊಡಿಸಿ ಕಳಿಸಿದೆ ಎಂದು ಬರೆದುಕೊಂಡಿದ್ದರು. ಆ ವಿಚಾರವನ್ನು ಪ್ರಸ್ತಾಪಿಸಿದ ಶಿವಸುಂದರ್ ಅವರು ಯಥಾ ಪ್ರಕಾರ ತಮ್ಮ ಪ್ರಬುದ್ಧ ಕೀಟಲೆ ಶೈಲಿಯಲ್ಲಿ, ''ನೋಡ್ರಿ ನಮ್ಮ ಮೇಡಂ, ಕೇವಲ ಉತ್ತರ ಭಾರತದ ಕನ್ಹಯ್ಯ, ಜಿಗ್ನೇಶ್, ಚಂದ್ರಶೇಖರ್ ರಾವಣ್, ಶೆಹ್ಲಾ ಇಂತವರನ್ನೇ ದತ್ತು ತಗೊಳ್ತಾರೆ. ದಕ್ಷಿಣ ಭಾರತದವರಾದ ನಮ್ಮನ್ನೂ ದತ್ತು ತಗೊಬಹುದಿತ್ತಲ್ಲವಾ? ಅವ್ರಿಗೆಲ್ಲ ಬಟ್ಟೆ ಕೊಡಿಸಿ ಕಳಿಸ್ತಾರೆ. ನಮಗೆ ಕಡೇಪಕ್ಷ ಒಂದು ಕರ್ಚೀಫಾದ್ರೂ ಕೊಡ್ಸಿ ದಾರಾ? ಉತ್ತರಭಾರತದವರ ಬಲು ವ್ಯಾಮೋಹಿಯಪ್ಪ ಗೌರಿ'' ಎಂದು ಚಟಾಕಿ ಹಾರಿಸಿದರು. ರಾಜು ನಕ್ಕು ಸುಮ್ಮನಾದರೆ, ನಾನು ತುಂಬಾ ಉತ್ಸಾಹಭರಿತನಾಗಿ, ''ಹೌದಲ್ವಾ ಸಾರ್, ನಮಗೆ ಒಂದು ಕರ್ಚೀಫೂ ಕೊಡ್ಸಿಲ್ವಲ್ಲಾ ನವ್ ಮೇಡಂ!'' ಎಂದು ದನಿಗೂಡಿಸಿದೆ. ದುರಾದೃಷ್ಟಕ್ಕೆ ನನ್ನ ಮಾತು ಮುಗಿಯುವ ಮೊದಲೇ ಬಾಗಿಲಲ್ಲಿ ಗೌರಿ ಮೇಡಂ ಪ್ರತ್ಯಕ್ಷವಾಗಿ ನಮ್ಮ ನಗುವಿನ ಹರಟೆ ಕಂಡು, ''ಏನು? ಏನದು? ನನ್ ಬಗ್ಗೆನೆ ಏನೋ ಮಾತಾಡ್ಕೊತಾ ಇದೀರಿ'' ಎಂದು ಕೂಡಿಕೊಂಡರು. ನಮ್ಮ ಬುದ್ದಿಜೀವಿ ಶಿವಸುಂದರರು ತಕ್ಷಣವೇ ತನ್ನ ಅಷ್ಟೂ ಆರೋಪವನ್ನು ನನ್ನ ಮೇಲೆ ಎತ್ತಿಬಿಸಾಕಿ, ''ನೋಡಿ, ಗಿರೀಶ್ ನಿಮ್ಮ ಮೇಲೆ ದೂರು ಹೇಳ್ತಾ ಇದಾರೆ, ನೀವು ಬರೀ ಉತ್ತರ ಭಾರತದವರನ್ನೇ ದತ್ತು ತಗೊಳ್ತೀರಿ, ದಕ್ಷಿಣದವರನ್ನಲ್ಲ ಅಂತೇಳಿ ಜಾರಿಕೊಂಡರು. ಗೌರಿ ಮೇಡಂ ನಕ್ಕು ತಮ್ಮ ಚೇಂಬರಿನತ್ತ ಹೋದರು.



ಇದು ತಮಾಷೆ ಪ್ರಸಂಗ. ಇಲ್ಲೊಂದಷ್ಟು ಸಂಗತಿಗಳಿವೆ. ಗೌರಿಯವರು ಕನ್ಹಯ್ಯ, ಜಿಗ್ನೇಶ್ ತರಹದ ಯುವ ಭರವಸೆಗಳನ್ನು ಯಾಕೆ ಅಷ್ಟು ಬಿಗಿದಪ್ಪಿಕೊಳ್ಳುತ್ತಿದ್ದರು? ವ್ಯವಸ್ಥೆಗೆ ಬಲಿಪಶುವಾದ ರೋಹಿತ್ ವೇಮುಲ ಎಂಬ ದುರಂತ ನಕ್ಷತ್ರಕ್ಕಾಗಿ ಯಾಕಷ್ಟು ಕೊರಗಿದರು? (ಕೊನೇ ಘಳಿಗೆಯವರೆಗೆ ಅವರ ಫೇಸ್‌ಬುಕ್ ಡಿಪಿಯ ಪಟವಾಗಿ ವೇಮುಲು ಫೋಟೊ ಹಾಕಿಕೊಂಡಿದ್ದರು, ಈಗಲೂ ಇದೆ), ನಮ್ಮದೇ ನಾಡಿನ ನವೀನ್ ಸೂರಿಂಜೆ, ಬಿಎಂ ಬಷೀರ್, ಮಲ್ಲಿಗೆ, ಡಾ. ವಾಸು, ಹರ್ಷಕುಗ್ವೆ, ಹುಲಿಕುಂಟೆ ಮೂರ್ತಿ, ವಿಕಾಸ್ ಮೌರ್ಯ ತರಹದ ಹೊಸಪೀಳಿಗೆಯವರಿಗೆ ಯಾಕೆ ಅಕ್ಕನಾಗಿಯೋ, ಹಿತೈಷಿಯಾಗಿಯೋ ಜೊತೆ ನಿಂತರು?

ಉತ್ತರ ಸ್ಪಷ್ಟವಿದೆ. ಅದು ಹೊಸದೂ ಅಲ್ಲ. ಒಂದು ಸಮಾಜದ ಪರಿವರ್ತನೆಯ ಮೂಲ ಇಂಧನ ಇರುವುದೇ ಆ ಸಮಾಜದ ಯುವಸಮೂಹದಲ್ಲಿ. ಆದರೆ ಗೌರಿಯವರ ಕಾಲಘಟ್ಟಕ್ಕಾಗಲೇ ಅಂತಹ ಯುವಸಮೂಹವನ್ನೆ ಕೋಮುವಾದಿ ರಾಜಕಾರಣವು ಧರ್ಮದ ಅಫೀಮು ತಿನ್ನಿಸಿ ತನ್ನ ಕೈವಶ ಮಾಡಿಕೊಂಡಿತ್ತು. ಆ ಯುವ ಸಮೂಹವನ್ನು ಮತೀಯವಾದಿಗಳ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸದ ಹೊರತು ದೇಶದ ಪ್ರಜಾತಾಂತ್ರಿಕ ಮತ್ತು ಸಾಂವಿಧಾನಿಕ ಮೌಲ್ಯಗಳಿಗೆ ಉಳಿಗಾಲವಿಲ್ಲ ಎಂಬುದನ್ನು ಗೌರಿಯವರೂ ಸೇರಿದಂತೆ ಬಹಳಷ್ಟು ಚಿಂತಕರು ಅರ್ಥ ಮಾಡಿಕೊಂಡಿದ್ದರು. ಆದರೆ ಹೇಗೆ?

ಹಿರಿಯರ, ಅನುಭವಿಗಳ ಮಾತುಗಳನ್ನು ಕೇಳಿಸಿಕೊಳ್ಳುವ ವ್ಯವಧಾನ ಆ ಹೊಸ ಸಮುದಾಯಕ್ಕಿರಲಿಲ್ಲ. ಇನ್‌ಫ್ಯಾಕ್ಟ್, ಅವರನ್ನೆಲ್ಲ ದೇಶದ್ರೋಹಿಗಳು, ಗಂಜಿಗಿರಾಕಿಗಳು, ಧರ್ಮವಿರೋಧಿಗಳು, ಲದ್ದಿಜೀವಿಗಳು, ಅರ್ಬನ್ ನಕ್ಸಲರು (ಇತ್ತೀಚೆಗೆ ದಿವಮಾಗಿ ನಕ್ಸಲರು ಪದ ಸೇರ್ಪಡೆ) ಎಂಬ ಪೂರ್ವಗ್ರಹಿ ಪದಗುಚ್ಛಗಳ ಮೂಲಕ ಬ್ರ್ಯಾಂಡ್ ಮಾಡಿ, ಅವರ ಪ್ರಭಾವದಿಂದ ಯುವಜನರನ್ನು ದೂರ ಮಾಡಲಾಗಿತ್ತು. ದೂರ ಮಾಡಲಾಗಿತ್ತು, ಎನ್ನುವುದಕ್ಕಿಂತ ಚಿಂತಕರ ವಲಯವನ್ನು ಅಕ್ಷರಶಃ ದ್ವೇಷಿಸುವಷ್ಟು ಯುವಕರ ಮನಸ್ಸನ್ನು ಕಹಿಗೊಳಿಸಲಾಗಿತ್ತು. ಹಾಗೆ ಕಹಿಗೊಳಿಸಲ್ಪಟ್ಟ ಯುವಕರೇ ಕೊನೆಗೆ ಗೌರಿಯವರನ್ನು ಕೊಂದುಹಾಕಿದ್ದು ಇದಕ್ಕೆ ಸಾಕ್ಷಿ.

ಇಂಥಾ ಸಂದರ್ಭದಲ್ಲಿ ಹಾದಿ ತಪ್ಪುತ್ತಿರುವ ಯುವ ಸಮುದಾಯದ ಜೊತೆ ಸಂವಾದ ನಡೆಸಿ, ಅವರ ಚಿಂತನಾ ಕ್ರಮ ಬದಲಿಸುವುದು ಯಾರು? ಯುವಸಮುದಾಯದ ನಡುವೆಯೇ ಅವತರಿಸುವ ವಿಚಾರವಂತ ಮನಸುಗಳಿಗೆ ಮಾತ್ರ ಸಾಧ್ಯ. ಯುವಸಮೂಹ ಸ್ಪಂದಿಸುವ ಸಂಗತಿಗಳನ್ನಿಟ್ಟುಕೊಂಡು, ಅವರ ಪೀಳಿಗೆಯದೇ ಭಾಷೆಯಲ್ಲಿ ಸಂವಾದಿಸದ ಹೊರತು ಯುವಜನರನ್ನು ಮತೀಯ ಚಿಂತನೆಗಳಿಂದ ಆಚೆತರಲು ಸಾಧ್ಯವಿಲ್ಲ. ಇದನ್ನು ಗೌರಿ ಅರಿತಿದ್ದರು. ಇವತ್ತು ತಮ್ಮನ್ನು ತಾವು ಬಲಾಢ್ಯರು, ಅಜೇಯರು ಎಂದುಕೊಂಡಿದ್ದವರನ್ನು ಕೂಡಾ ಮಂಡಿಯೂರುವಂತೆ ಮಾಡಿದ ಜೆನ್ ಝಿ ಪೀಳಿಗೆಯ ಸಾಹಸವೇನಿದೆಯಲ್ಲ, ಇದನ್ನು ಯುವಸಮೂಹ ಮಾತ್ರ ಮಾಡಬಲ್ಲದು ಎಂದು ಗೌರಿ ಬಹಳ ಹಿಂದೆಯೇ ಅರ್ಥ ಮಾಡಿಕೊಂಡಿದ್ದರಿಂದ ದೇಶದ ಮೂಲೆಮೂಲೆಯಲ್ಲಿ ದನಿ ಎತ್ತುತ್ತಿದ್ದ ಯುವ ಧ್ವನಿಗಳನ್ನು ಮುಲಾಜಿಲ್ಲದೆ ಬಿಗಿದಪ್ಪಿಕೊಳ್ಳುತ್ತಾ ಬಂದರು.

ಹಾಗೆ ಬರಸೆಳೆದುಕೊಳ್ಳುವಾಗ, ಆ ಯುವಧನಿಗಳು ತಾವು ಬಯಸುವ ಪರಿವರ್ತನೆಗೆ ಹಾದಿಯಾಗುತ್ತಾರೆ ಎಂಬ ನಿರೀಕ್ಷೆ ಮಾತ್ರ ಗೌರಿಯವರದ್ದಾಗಿರಲಿಲ್ಲ. ಮತೀಯವಾಗಿ ಕಲುಷಿತಗೊಂಡಿರುವ ಈ ವಾತಾವರಣದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಿಗಾಗಿ ದನಿ ಎತ್ತುವವರ ಮೇಲೆ ಹೇಗೆಲ್ಲಾ ದಾಳಿ ನಡೆಸಲಾಗುತ್ತೆ, ಹತ್ತಿಕ್ಕಲು ಯತ್ನಿಸಲಾಗುತ್ತೆ ಎಂಬುದನ್ನು ಗೌರಿಯವರು ಸ್ವತಃ ಅನುಭವಿಸಿ ಉಂಡವರು. ಆ ಯುವದನಿಗಳೂ ಅಂತಹ ದಾಳಿಗಳಿಗೆ ಈಡಾಗುವುದರಲ್ಲಿ ಸಂಶಯವಿರಲಿಲ್ಲ. ಹೀಗೆ ದಾಳಿಗಳ ಆಘಾತಕ್ಕೀಡಾದ ಅವರಿಗೆ ವೈಯಕ್ತಿಕ ನೆಲೆಯಲ್ಲಿ ಆತ್ಮಸ್ಥೈರ್ಯ ತುಂಬಿ, ಬಲವನ್ನು ಒಗ್ಗೂಡಿಸಿಕೊಡಬೇಕಾದದು ಹಿರಿಯರಾಗಿ ನಾವು ಮಾಡಬೇಕಾದ ಅತ್ಯಂತ ತುರ್ತು ಕೆಲಸ ಎಂದು ಗೌರಿಯವರು ನಿಶ್ಚಯಿಸಿಕೊಂಡಿದ್ದರು. ದೃಢ ನಿಲುವು. ತಮ್ಮ ಪ್ರೋತ್ಸಾಹವನ್ನು ಕೇವಲ ಬೆಂಬಲದ ದನಿಗೆ ಮಾತ್ರ ಸೀಮಿತವಾಗಿಸಿಕೊಳ್ಳದೆ, ಅದಕ್ಕೊಂದು ನಂಟಿನ ರೂಪ ನೀಡಲು ದತ್ತು ಮಕ್ಕಳೆಂದು ಘೋಷಿಸುವ ಹೊಸ ದಾರಿಯನ್ನು ಗೌರಿಯವರು ಕಂಡುಕೊಂಡರು. ಬಾಯ್ಮಾತಿನಲ್ಲಿ ಧೈರ್ಯ ತುಂಬುವುದಕ್ಕೂ, ಹೀಗೆ ಅವರೊಟ್ಟಿಗೆ ಆತ್ಮೀಯ ನಂಟು ಹೆಣೆದುಕೊಂಡು ಕಸುವು ಹಿಗ್ಗಿಸುವುದಕ್ಕೂ ತುಂಬಾ ವ್ಯತ್ಯಾಸವಿದೆ. ಬಹುಶಃ ಗೌರಿ ಒಬ್ಬ ಹೆಣ್ಣಾದ ಕಾರಣಕ್ಕೆ, ಅವರೊಳಗಿದ್ದ ತಾಯ್ತನ ದತ್ತು ಎಂಬ ಈ ದಾರಿಯನ್ನು ಶೋಧಿಸಿಕೊಂಡಿರಬಹುದು.

ಗೌರಿಯವರ ಈ ಹೊಸ ದಾರಿಯಿಂದಾಗಿ, ಉತ್ತರದ ಹಿಂದಿ ರಾಜ್ಯಗಳಿಗೆ ಮಾತ್ರ ಸೀಮಿತಗೊಳ್ಳಬಹುದಾಗಿದ್ದ ಜಿಗ್ನೇಶ್, ಕನ್ಹಯ್ಯ ಮೊದಲಾದವರು ಕನ್ನಡದ ಪರಿಸರಕ್ಕೂ ವ್ಯಾಪಿಸಿದರು. ಗೌರಿ ನಿರಂತರವಾಗಿ ತನ್ನನ್ನು ಇಂತಹ ಮೌಲ್ಯಗಳ ಬೆಸೆಯುವಿಕೆಗೆ ತೆತ್ತುಕೊಳ್ಳುತ್ತಾ ಬಂದರು. ಬಹುಶಃ ಅವರನ್ನು ಹತ್ಯೆಗೈದ ಕೊಲೆಗಡುಕರಿಗೆ ಗೌರಿಯವರ ಈ ಗೋಂದು ಗುಣವೇ ದೊಡ್ಡ ಥ್ರೆಟ್ ಆಗಿ ಭಾಸವಾಗಿದ್ದಿರಬಹುದು. ಹಸಿರು (ರೈತ), ನೀಲಿ (ದಲಿತ) ಮತ್ತು ಕೆಂಪು (ಕಾರ್ಮಿಕ) ಬಣ್ಣಗಳು ಒಗ್ಗೂಡುವುದು ಮಾತ್ರವೇ ಈ ದೇಶದ ಭವಿಷ್ಯವನ್ನು ಬೆಳಗುವ ಸೂತ್ರ ಎಂದು ಗಟ್ಟಿಧನಿಯಲ್ಲಿ ಮಾತಾಡುತ್ತಿದ್ದ ಗೌರಿ, ಅದರ ಜೊತೆಗೆ ಯುವಸಮೂಹವನ್ನೂ ಹೀಗೆ ಬೆಸೆಯಲು ಮುಂದಾದದ್ದು ವಿರೋಧಿಗಳಿಗೆ ನಡುಕ ಹುಟ್ಟಿಸಿದ್ದಿರಬಹುದು. ಹತ್ಯೆಯ ಸಂಚು ರೂಪುತಳೆದಿದ್ದರಲ್ಲಿ ಆ ನಡುಕದ ಪಾತ್ರವನ್ನು ಅಲ್ಲಗಳೆಯಲಾಗದು.

ಒಂದಂತೂ ಸತ್ಯ, ಯಾವ ಯುವಪೀಳಿಗೆಯ ಮೇಲೆ ಕನಸು ನೆಟ್ಟು, ತನ್ನ ಕೈಲಾದ ಮಟ್ಟಿಗೆ ಆ ದನಿಗಳನ್ನು ಬೆಂಬಲಿಸಲು ಗೌರಿ ಯತ್ನಿಸಿದ್ದರೋ, ಆ ಭರವಸೆ ಇಂದು ಜೆನ್ ಝೀ ಹೋರಾಟದ ರೂಪಾಂತರದಲ್ಲಿ ದಿಟಗೊಂಡಿದೆ. ಅಕಸ್ಮಾತ್ ಜೆನ್ ಝಿ ಚಳವಳಿಯ ಕಾಲದಲ್ಲಿ ಗೌರಿಯವರು ಇದ್ದಿದ್ದರೆ, ದಿಲ್ಲಿಯ ಜಂತರ್‌ಮಂತರ್‌ನಲ್ಲಿ ಆ ಮಕ್ಕಳೊಟ್ಟಿಗೆ ಪಟ್ಟುಹಿಡಿದು ಕೂರುತ್ತಿದ್ದರು.

ಉತ್ತರಾಖಂಡದಲ್ಲಿ ದೀಪಕ್ ಮೊಹಮದ್ ಪ್ರಕರಣ ನಡೆದಾಗ, ಗೌರಿಯವರ ಅನುಪಸ್ಥಿತಿ ನನ್ನನ್ನು ಕಾಡಿತ್ತು. ಅಕಸ್ಮಾತ್ ಅವರು ಇದ್ದಿದ್ದರೆ, ಮತಾಂಧರಿಗೆ ಎದೆಗೊಟ್ಟು ನಿಂತಿದ್ದ ಮತ್ತು ಆ ಕಾರಣಕ್ಕೆ ತದನಂತರ ಅವರಿಂದ ಕಿರುಕುಳಕ್ಕೆ ತುತ್ತಾಗಿದ್ದ ದೀಪಕ್ ಮೊಹಮದ್‌ನನ್ನೂ ದತ್ತು ಸ್ವೀಕರಿಸಿ ಕರ್ನಾಟಕಕ್ಕೆ ಕರೆಯಿಸುತ್ತಿದ್ದರಲ್ಲಿ ಅನುಮಾನವಿಲ್ಲ. ಆ ಮೂಲಕ ಆತನಿಗೂ ಬಲವನ್ನು ಕ್ರೋಢೀಕರಿಸುವುದರ ಜೊತೆಗೆ, ಆತನ ಸೌಹಾರ್ದದ ದಿಟ್ಟ ದನಿಯನ್ನು ದಕ್ಷಿಣದ ರಾಜ್ಯಗಳಿಗೂ ಪಸರಿಸುವಂತೆ ಮಾಡುತ್ತಿದ್ದರು.

ಯಾವ ಬೆದರಿಕೆಗಳ ಮುಲಾಜಿಗೂ ಜಗ್ಗದೆ, ತನ್ನ ಜೀವಕ್ಕೂ ಸಂಚಕಾರ ತೆಗೆದುಕೊಳ್ಳುತ್ತಾ ಭರವಸೆಯ ಆ ಕುಡಿಗಳ ಬೆನ್ನಿಗೆ ನಿಲ್ಲುವ ದಿಟ್ಟತನ ಗೌರಿಯವರಿಗೆ ಎಲ್ಲಿಂದ ಬಂತು? ಹೆಣ್ಣನ್ನು ನಾವು ಸಾಮಾನ್ಯವಾಗಿ ಪ್ರಕೃತಿಗೆ ಹೋಲಿಸುತ್ತೇವೆ. ಸೃಷ್ಟಿಸುವ ಕ್ರಿಯೆ ಮಾತ್ರವಲ್ಲದೆ, ಪೊರೆಯುವ ಕಾಯಕವೂ ಸ್ತ್ರೀ-ಪ್ರಕೃತಿಯದ್ದು. ಇದನ್ನೆ ನಾವು ತಾಯಿ ಎಂದು ಸುಲಭವಾಗಿ ಕರೆದುಬಿಡುತ್ತೇವೆ. ಗೌರಿ ಮೇಡಂ ಈ ತಾಯ್ತನಕ್ಕೆ ಒಂದು ಉನ್ನತ ಉದಾಹರಣೆಯಾಗಿ ಗೋಚರಿಸುತ್ತಾರೆ. ಜಾತಿವ್ಯವಸ್ಥೆ, ಕೋಮುವಾದ, ಲಿಂಗ ಅಸಮಾನತೆಗಳಂತಹ ಕೆಡುಕುಗಳ ವಿರುದ್ಧ ಅವರು ನಿಗಿಕೆಂಡದಂತೆ ಉರಿದುಬೀಳುತ್ತಿದ್ದುದು ಕೂಡಾ ಇದೇ ತಾಯ್ತನದ ಕಾರಣದಿಂದ. ಯಾವುದೇ ಪ್ರಾಣಿ ಅಥವಾ ಪಕ್ಷಿಯು ತನ್ನ ಮರಿಗಳ ಮೇಲೆ ಅನ್ಯರು ದಾಳಿ ಮಾಡುವುದನ್ನು ಸಹಿಸುವುದಿಲ್ಲ. ತನ್ನ ಪ್ರಾಣವನ್ನೂ ಲೆಕ್ಕಿಸದೆ ಕಾದಾಟಕ್ಕಿಳಿಯುತ್ತವೆ. ಆ ಕಾದಾಟದಲ್ಲಿ ಬದುಕುಳಿಯುವ ಅವಕಾಶ ತನಗಿದೆಯೇ ಎಂಬ ವ್ಯಾವಹಾರಿಕ ತರ್ಕಕ್ಕೆ ಅವು ಮುಂದಾಗಲಾರವು. ಅವುಗಳ ಆ ಉಗ್ರರೂಪ ಕಂಡ ದಾಳಿಕೋರರಿಗೆ ಆ ತಾಯಿಯ ಮೇಲೆ ಕೋಪ ಉಕ್ಕಬಹುದು; ಹಠಮಾರಿಯೆನಿಸಬಹುದು; ಕೊನೆಗೆ, ಕೊಲ್ಲಲೂಬಹುದು. ಆದರೆ ಆ ತಾಯಿ ಅದಕ್ಕೆಲ್ಲ ಸಿದ್ಧವಾಗಿಯೇ ಉಗ್ರರೂಪ ಧರಿಸಿರುತ್ತದೆ. ಯಾಕೆಂದರೆ ಆ ತಾಯಿಗೆ ಮರಿಗಳ ರಕ್ಷಣೆ ಮಾತ್ರ ಮುಖ್ಯ. ಹೊರಗಿನಿಂದ ಅಥವಾ ದೂರದಿಂದ ನೋಡುವವರಿಗೆ ನಿಷ್ಠುರವಾಗಿ, ಭಂಡಧೈರ್ಯಸ್ಥೆಯಾಗಿ ಗೋಚರಿಸುತ್ತಿದ್ದ ಗೌರಿಯವರ ತಾಯ್ತನದ ಮೃದುತ್ವ, ಕಕ್ಕುಲಾತಿ ಹತ್ತಿರದಿಂದ ಅರ್ಥ ಮಾಡಿಕೊಂಡವರಿಗಷ್ಟೇ ಅರ್ಥ. ಇಲ್ಲವಾಗಿದ್ದರೆ ಹಂತಕರ ಬಂದೂಕಿನಿಂದ ಚಿಮ್ಮಿದ ಒಂದು ಗುಂಡಿಗೆ ಪ್ರತಿಯಾಗಿ ಒಮ್ಮೆಲೆ ಲಕ್ಷಾಂತರ ಗೌರಿಗಳಾಗಿ ಚಿಗುರಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ.

ಹುತಾತ್ಮರಾದ ನಂತರವೂ ಗೌರಿಯವರ ವ್ಯಕ್ತಿತ್ವದಲ್ಲಿ ಇರಬಹುದಾದ ವ್ಯಕ್ತಿಸಹಜ ಲೋಪಗಳನ್ನೋ, ಮಿತಿಗಳನ್ನೋ ಹುಡುಕುವುದರಲ್ಲಿ ನಮ್ಮ ಕೆಲ ಹಿರಿಯರು ಕಳೆದುಹೋಗಿದ್ದಾಗ (ಕೆಲವರೆಂದರೆ ಕೆಲವರಷ್ಟೆ! ನನಗೆ ತಿಳಿದಂತೆ ಗೌರಿಯನ್ನು ತಮ್ಮ ಎದೆಗೆ ಇಳಿಸಿಕೊಂಡ ಹಿರಿಯರೂ ಸಾಕಷ್ಟು ಮಂದಿ ಇದ್ದಾರೆ. ಕೆಲವರಂತೂ ವಯಸ್ಸಿನಲ್ಲಿ ಗೌರಿಯವರಿಗಿಂತ ಹಿರಿಯರಾಗಿದ್ದರೂ, ಆಕೆಯ ಬಲಿದಾನ ಕಂಡು, ತನ್ನ ತಾಯಿ-ಅವ್ವ ಎಂದು ಅಪ್ಪಿಕೊಂಡವರೂ ಇದ್ದಾರೆ) ಗೌರಿಯನ್ನು ತಮ್ಮೊಳಗೆ ಹೆಚ್ಚು ಆವಾಹಿಸಿಕೊಂಡಿದ್ದೇ ಯುವಸಮೂಹ. ಇದು ಗೌರಿ ಯುವಜನಾಂಗಕ್ಕೆ ತೋರಿದ ಅಕ್ಕರೆಯ ಪ್ರತೀಕ.

ನಾನೇ ಕಂಡ ಒಂದು ಸಣ್ಣ ಉದಾಹರಣೆ ಇಲ್ಲಿಗೆ ಸೂಕ್ತವಾಗಬಹುದು. ಅದು 2017ರಲ್ಲಿ, ಅಂದರೆ ಗೌರಿಯವರು ನಮ್ಮನ್ನೆಲ್ಲ ಅಗಲಿದ ವರ್ಷ, ದಾವಣಗೆರೆಯಲ್ಲಿ ನಡೆದ ಲಂಕೇಶ್ ಕಾರ್ಯಕ್ರಮದ ಸಂದರ್ಭ. ಪತ್ರಿಕಾಗೋಷ್ಠಿ ನಡೆಸುವುದಕ್ಕೆಂದು ಒಂದುದಿನ ಮೊದಲೇ ನಾವೆಲ್ಲಾ ಅಲ್ಲಿದ್ದೆವು. ಅವತ್ತು ರಾತ್ರಿ ತಂಗಲು ಗೌರಿ ಮೇಡಂಗೆ ಐಬಿಯ ವಿಶಾಲ ರೂಮು ನಿಗದಿಯಾಗಿತ್ತು. ನಾವು ಪಕ್ಕದ ಹೊಟೇಲೊಂದರಲ್ಲಿ ಉಳಿದಿದ್ದೆವು. ರಾತ್ರಿ ಊಟವಾದ ತರುವಾಯ ಮಲಗುವುದಕ್ಕು ಮುನ್ನ, ಒಮ್ಮೆ ಮೇಡಂ ಮಾತಾಡಿಸಿಕೊಂಡು ಬರೋಣವೆಂದು ಐಬಿಯತ್ತ ಬಂದೆವು. ಅವರ ರೂಮಿನ ತುಂಬಾ, ನಾಳೆಯ ಕಾರ್ಯಕ್ರಮಕ್ಕೆಂದು ಬೇರೆಬೇರೆ ಊರುಗಳಿಂದ ಬಂದಿದ್ದ ಯುವಕಯುವತಿಯರು ತುಂಬಿದ್ದರು. ಅವರ ನಡುವೆ ಹಾಸಿಗೆ ಮೇಲೆ ಕೂತು ಮೇಡಂ ಖುಷಿಯಿಂದ ಹರಟುತ್ತಿದ್ದರು. ಮಲಗುವ ಸಮಯವಾದಾಗ, ಒಂದಿಬ್ಬರು ಹುಡುಗಿಯರಿಗೆ ತಮ್ಮ ಪಕ್ಕದಲ್ಲೇ ಮಲಗಲು ಹೇಳಿ, ಬೇರೆಯವರಿಗೆ ವಿಶಾಲ ರೂಮಿನ ಅಲ್ಲಲ್ಲಿ ಮಲಗಲು ತಾಯಿಯಂತೆ ವ್ಯವಸ್ಥೆ ಮಾಡಲು ಮುಂದಾದರು. ಕೇವಲ ಇದಿಷ್ಟೇ ಹೇಳಿದರೆ, ಇದರಲ್ಲಿ ವಿಶೇಷವೇನೂ ಗೋಚರಿಸದು. ವಿಶೇಷವನ್ನು ಕಾಣಬೇಕೆಂದರೆ, ಸುಮಾರು ಹತ್ತನ್ನೆರಡು ವರ್ಷ ಹಿಂದಕ್ಕೆ ಚಲಿಸಿ, ಆಗಿನ ಗೌರಿಯವರ ವರ್ತನೆಯೊಟ್ಟಿಗೆ ಇದನ್ನು ಹೋಲಿಕೆ ಮಾಡಬೇಕಾಗುತ್ತದೆ. ಈ ಘಟನೆಗೆ ನಾನು ಪ್ರತ್ಯಕ್ಷದರ್ಶಿಯಲ್ಲ. ಅವರ ಆತ್ಮೀಯ ಒಡನಾಡಿಯಾದ ಶಿವಸುಂದರ್ ಅವರ ಅನುಭವ. ಬಾಬಾಬುಡನ್‌ಗಿರಿ ಹೋರಾಟ ಸಂದರ್ಭದ ಘಟನೆ.

ಆಗಷ್ಟೆ ಇಂಗ್ಲಿಷ್ ಎಲೈಟ್ ಜರ್ನಲಿಸಂನಿಂದ ಕನ್ನಡ ಪತ್ರಿಕೋದ್ಯಮಕ್ಕೆ ಬಂದಿದ್ದ ಗೌರಿಯವರ ಮೊಟ್ಟಮೊದಲ ಸಾಮಾಜಿಕ ಹೋರಾಟ ಅದು.

ಒಮ್ಮೆ ಎಲ್ಲಾ ಸೌಹಾರ್ದ ಹೋರಾಟಗಾರರು ಚಿಕ್ಕಮಗಳೂರಿಗೆ ಹೋಗಿದ್ದಾರೆ. ಚಳವಳಿಗಾರರೆಂದರೆ, ತಂಗಲು ಸೌಖ್ಯ ವ್ಯವಸ್ಥೆಗಳು ಇರುವುದುಂಟೆ? ಹಾಗೋಹೀಗೋ ಕಷ್ಟಪಟ್ಟು ಒಂದೆರಡು ರೂಮು ವ್ಯವಸ್ಥೆ ಮಾಡಿದ್ದಾರೆ. ಅವುಗಳಲ್ಲೇ ಕಿಕ್ಕಿರಿದು ತಂಗುವುದು ಅವರ ಅನಿವಾರ್ಯ ಉದ್ದೇಶ. ಆದರೆ ಎಲೈಟ್ ಬದುಕಿನಿಂದ ಬಂದಿದ್ದ ಗೌರಿಯವರಿಗೆ ಅದರ ಅಂದಾಜಿಲ್ಲ. ಊಟವಾದ ನಂತರ ಕೆಲವರು ಒಂದು ರೂಮಿನಲ್ಲಿ ಕೂತು ನಾಳೆಯ ಕಾರ್ಯಕ್ರಮದ ಚರ್ಚೆ ನಡೆಸಿದ್ದಾರೆ. ಗೌರಿಯವರಿಗೆ ನಿದ್ರೆ ಬಂದಿದೆ. ಎದ್ದು ಹೋಗುತ್ತಾರೆಂದು ಸ್ವಲ್ಪ ಹೊತ್ತು ಕಾದಿದ್ದಾರೆ. ಪಾಪಾ, ಅದೇ ರೂಮಿನಲ್ಲಿ ಅಡ್ಜಸ್ಟ್ ಮಾಡಿಕೊಂಡು ಮಲಗುವುದೆಂದು ನಿರ್ಧರಿಸಿಕೊಂಡು ಬಂದಿದ್ದವರು ಅವರೆಲ್ಲ. ಇದು ಗೌರಿಯವರಿಗೆ ಗೊತ್ತಿಲ್ಲ. ಅವರ್‍ಯಾರು ಎದ್ದುಹೋಗುವುದು ಕಾಣದಿದ್ದಾಗ ಗೌರಿಯವರು ''ಸರಿ, ಸರಿ, ಬೆಳಿಗ್ಗೆ ಸಿಗೋಣ. ಈಗ ನಾನು ಮಲಗಬೇಕು. ಎಲ್ಲರೂ ನಿಮ್ಮ ನಿಮ್ಮ ರೂಮಿಗೆ ಹೋಗಿ'' ಎಂದರಂತೆ. ಅವರೆಲ್ಲಾ ಕಕ್ಕಾಬಿಕ್ಕಿ. ಅವರಿಗೆ ಅಂತ ಪ್ರತ್ಯೇಕ ರೂಮುಗಳಿರಲಿಲ್ಲ. ಪರಿಸ್ಥಿತಿಯನ್ನು ಗೌರಿಯವರಿಗೆ ಅರ್ಥ ಮಾಡಿಸಲು ಮುಂದಾದರಂತೆ. ಆಗ ಗೌರಿ, ''ಸಾಧ್ಯವೇ ಇಲ್ಲ! ನನಗೆ ಹೀಗೆಲ್ಲ ಗುಂಪಲ್ಲಿ ಮಲಗಿ ಅಭ್ಯಾಸವಿಲ್ಲ. ನನಗೆ ಪ್ರೈವೇಸಿ ಬೇಕು. ಹೊರಡಿ, ನೀವು ಹೊರಡಿ'' ಎಂದು ಮುಲಾಜಿಲ್ಲದೆ ಎಲ್ಲರನ್ನು ಕಳಿಸಿ, ಒಬ್ಬರೇ ರೂಮಲ್ಲಿ ಮಲಗಿದರಂತೆ. ಹಾಗೆ ಇದ್ದ ಗೌರಿ, ಒಂದು ದಶಕದಲ್ಲಿ ಸಂಪೂರ್ಣ ರೂಪಾಂತರವಾದರು. ದಾವಣಗೆರೆ ಐಬಿಯ ತನ್ನ ರೂಮಿನ ತುಂಬಾ ಹೊಸ ತಲೆಮಾರಿನ ಯುವಜನರನ್ನು ತುಂಬಿಕೊಂಡು, ಅವರಿಗೆ ಮಲಗಲು ಅದೇ ರೂಮಿನಲ್ಲಿ ವ್ಯವಸ್ಥೆ ಮಾಡಿಕೊಟ್ಟರು. ಇದು ಹೊಸಪೀಳಿಗೆಯವರ ಮೇಲೆ ಅವರು ಇಟ್ಟಿದ್ದ ಅಕ್ಕರೆಯನ್ನು ಮಾತ್ರ ತೋರುವುದಿಲ್ಲ; ಆ ಯುವಜನರಲ್ಲಿ ಇರಿಸಿದ್ದ ಭರವಸೆಯನ್ನೂ ನಮಗೆ ಕಾಣಿಸುತ್ತದೆ.

ಅಂದಹಾಗೆ, ಬರಹದ ಶುರುವಾತಿನಲ್ಲಿ ನಮಗಾಗಿ ಒಂದು ಕರ್ಚೀಫನ್ನೂ ಕೊಡಿಸಲಿಲ್ಲ ಎಂಬ ತಮಾಷೆ ಪ್ರಸಂಗ ಉಲ್ಲೇಖಿಸಿದ್ದೇನೆ. ಆಫೀಸಿನ ಸಿಬ್ಬಂದಿಗಳ ಬಗ್ಗೆ ಅವರು ಅಷ್ಟೊಂದೇನು ಅಸಡ್ಡೆಯಿಂದ ವರ್ತಿಸಿದವರಲ್ಲ. ಕಾಳಜಿಯನ್ನು ತೋರಬೇಕಾದ ಸಂದರ್ಭದಲ್ಲಿ, ತನ್ನ ಮಿತಿಗೊಳಪಟ್ಟು ತೋರುತ್ತಾ ಬಂದಿದ್ದರು.

ಒಮ್ಮೆ ನನ್ನ ಇಂಟರ್‌ಕಾಂ ಫೋನು ರಿಂಗಾಯ್ತು. ರಿಸೀವ್ ಮಾಡಿದರೆ, ಅತ್ತ ಕಡೆಯಿಂದ ಗೌರಿ ಮೇಡಂ ಧ್ವನಿ, ''ಗಿರೀಶ್ ಸ್ವಲ್ಪ ನನ್ನ ಚೇಂಬರಿಗೆ ಬರ್ತೀರಾ?'' ಅಂದರು. ನಾನು ಹೋಗಿ ನಿಂತೆ. ನನ್ನನ್ನ ಕಂಡ ಕೂಡಲೇ, ಕೆಳಗಿಟ್ಟಿದ್ದ ತಮ್ಮ ಬ್ಯಾಗಿನಿಂದ ಪರ್ಸ್ ಹೊರತೆಗೆದರು, ಸಾವಿರ ರೂಪಾಯಿಯ ಎರಡು ನೋಟುಗಳನ್ನು ತೆಗೆದು ನನ್ನತ್ತ ಚಾಚಿದರು. ಅಷ್ಟೆ! ಏನನ್ನೂ ಹೇಳಲಿಲ್ಲ. ನನಗೆ ಗಲಿಬಿಲಿಯಾಯ್ತು. ಏನಾದರು ತರುವುದಕ್ಕೆಂದು ದುಡ್ಡು ಕೊಡುತ್ತಿದ್ದಾರಾ? ಅವರು ಯಾವತ್ತೂ ನಮ್ಮಿಂದ ಹೊರಗಿನ ಕೆಲಸ ಮಾಡಿಸಿದವರಲ್ಲ. ಅಪರೂಪಕ್ಕೆ ಲಕ್ಷ್ಮಣ, ಪ್ರಸಾದ್ ಇಬ್ಬರೂ ಇರದಿದ್ದಾಗ, ಸ್ವತಃ ತಾವೇ ಫ್ಲಾಸ್ಕ್ ಹಿಡಿದು, ಹೊಟೇಲಿಗೆ ಹೋಗಿ, ಕಾಫಿ ತಂದು ನಮಗೆಲ್ಲ ಕೊಡುತ್ತಿದ್ದರು. ಅಂತದ್ದರಲ್ಲಿ ಏನನ್ನಾದರು ತರಲು ಹೇಳುವರೇ? ನಾನೇ ಕೇಳಿದೆ, ''ಯಾಕೆ ಮೇಡಂ ಈ ದುಡ್ಡು?''. ನನ್ನ ಪ್ರಶ್ನೆ ಮುಗಿಯುವ ಮೊದಲೇ ''ನನಗೂ ಗೊತ್ತಿಲ್ಲ ಎಂಬ ಥಟ್ಟನೆ ಉತ್ತರ ಬಂತು ಅವರಿಂದ. ವಿಚಿತ್ರ ಉತ್ತರ. ''ಕೊಡ್ಬೇಕು ಅನ್ನಿಸ್ತಿದೆ. ಕೊಡ್ತಾ ಇದೀನಿ. ತಗೋಳಿ'' ಎನ್ನುತ್ತ ತಮ್ಮ ಕೈಯನ್ನು ಮತ್ತಷ್ಟು ನನ್ನ ಕಡೆ ಚಾಚಿದರು. ತುಂಬಾ ತೀಕ್ಷ್ಣವಾಗಿ, ನೇರವಾಗಿ, ನಾಟಕೀಯತೆ ಇಲ್ಲದೆ ಮಾತಾಡುವುದು ಅವರ ಶೈಲಿ. ನನಗೂ ಆ ಸನ್ನಿವೇಶವನ್ನು ನಿಭಾಯಿಸುವ ದಾರಿ ತೋಚಲಿಲ್ಲ. ಇನ್ನಷ್ಟು ಹೊತ್ತು ಅಲ್ಲಿದ್ದು ಸಂಕೋಚದ ಮುದ್ದೆಯಾಗುವುದು ತಪ್ಪಿಸಿಕೊಳ್ಳಲು ದುಡ್ಡು ಪಡೆದು ಬಂದೆ.

ಸ್ವಲ್ಪ ದಿನಗಳ ನಂತರ ರಾಜು ಅವರ ಬಳಿ ಮಾತಾಡಿದಾಗ ಗೊತ್ತಾದದ್ದೇನೆಂದರೆ, ನಾನು ಪತ್ರಿಕೆಯಲ್ಲದೆ ಗೈಡ್, ಉದ್ಯೋಗ ಪತ್ರಿಕೆ, ಗೈಡ್ ಪ್ರಕಾಶನದ ಪುಸ್ತಕಗಳ ಸಂಪಾದನೆ ಹೀಗೆ ಹಲವು ಜವಾಬ್ದಾರಿ ನಿಭಾಯಿಸುತ್ತಿದ್ದನ್ನು ಕಂಡು, ನನ್ನ ಶ್ರಮಕ್ಕೆ ಸರಿಯಾದ ಸಂಬಳ ಕೊಡಲಾಗುತ್ತಿಲ್ಲವಲ್ಲಾ ಎಂದು ಒಮ್ಮೆ ಬೇಸರಿಸಿಕೊಂಡು ಮಾತಾಡಿದ್ದರಂತೆ. ಬಹುಶಃ ಆ ಬೇಸರ ಕಡಿಮೆ ಮಾಡಿಕೊಳ್ಳಲು ನನಗೆ ಆ ಹಣ ನೀಡಿದ್ದರು ಅನ್ನಿಸುತ್ತೆ. ಕಾಳಜಿಯ ದೊಡ್ಡದೊಡ್ಡ ಮಾತುಗಳನ್ನಾಡುವುದಕ್ಕಿಂತ, ಹೀಗೆ ಸಣ್ಣಪುಟ್ಟ ಕಾರ್ಯಗಳ ಮೂಲಕ ತೋರಿಸಿಬಿಡುತ್ತಿದ್ದರು. ಅಂದಹಾಗೆ, ನನಗೆ ಕೊಟ್ಟಿದ್ದು ಆಫೀಸ್ ಅಕೌಂಟಿನ ಹಣವಲ್ಲ. ಅವತ್ತು ಅವರಿಗೆ ಸಂಬಳವಾಗಿತ್ತು. ತನ್ನ ಸ್ವಂತ ಸಂಬಳದ ಹಣದಿಂದ ಆ ಎರಡು ಸಾವಿರ ರೂಪಾಯಿ ಕೊಟ್ಟಿದ್ದರು. ನನ್ನ ಬದುಕಿನಲ್ಲಿ ಗೌರಿ ಮೇಡಂ ಇಷ್ಟು ಗಾಢವಾಗಿ ಉಳಿದುಬಿಡುತ್ತಾರೆ ಎಂಬುದು ಗೊತ್ತಿದ್ದಿದ್ದರೆ, ಆ ಎರಡು ಸಾವಿರ ರೂಪಾಯಿಯನ್ನು ಜತನ ಮಾಡಿಟ್ಟುಕೊಳ್ಳುತ್ತಿದ್ದೆ. ಆದರೆ ಈಗ ಕಳೆದುಕೊಂಡಿದ್ದೇನೆ, ಹಣವನ್ನೂ; ಗೌರಿಯವರನ್ನೂ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR